iv) Effective Co-ordination with Revenue, Forest, Environment and other Departments for necessary clearances, NOC/approvals in a streamlined way;

v) Monitor grant of approvals for mineral concessions and compliance with provisions of different Enactments/Act/Rules;

vi) To review the action taken by the various Departments to checking illegal mining activities.

Periodicity of the meeting :

The committee will meet once in a quarter.

By Order and in the name of the Governor of Karnataka,

M. VASUDEVA MURTHY

Under Secretary to Government, (Mines),

Commerce & Industries Department.

PR. 55

I -F2 -(0)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಯೋಜನೆಗಳ ಅನುಷ್ಠಾನ ಕುರಿತಂತೆ ಜಿಲ್ಲಾ ಸಮಿತಿ, ಯೋಜನಾ ಅನುಮೋದನಾ ಸಮಿತಿ ಮತ್ತು ರಾಜ್ಯ ಮಟ್ಟದ ಸಮಿತಿ ರಚನೆ ಕುರಿತು.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ ಮಮಇ 356 ಪಿಹೆಚ್‌ಪಿ 2006, ದಿನಾಂಕ 25-06-2008

2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು, ಇವರ ಪತ್ರ ಸಂಖ್ಯೆ ಮಅನಿ; NHFDC 009, 2008-09/579, ದಿನಾಂಕ 09-11-2009.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಾಂಕ (1) ರ ಸರ್ಕಾರಿ ಆದೇಶದಲ್ಲಿ ರಾಷ್ಟ್ರೀಯ ಅಂಗವಿಕಲರ ಹಣಕಾಸು ಅಭಿವೃದ್ಧಿ ನಿಗಮದ ವತಿಯಿಂದ ರಾಜ್ಯದಲ್ಲಿ ಅಂಗವಿಕಲರಿಗಾಗಿ ಸಾಲ ಸೌಲಭ್ಯ ದೊರಕಿಸಿಕೊಡಲು ಚಾನಲೈಸಿಂಗ್ ಏಜೆನ್ಸಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಬದಲಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವನ್ನು 2008-09ನೇ ಆರ್ಥಿಕ ಸಾಲಿನಿಂದ ಚಾನಲೈಸಿಂಗ್ ಏಜೆನ್ಸಿಯಾಗಿ ಕರ್ತವ್ಯ ನಿರ್ವಹಿಸಲು ಆದೇಶಿಸಿದೆ.

2008-09ನೇ ಸಾಲಿನಿಂದ ರಾಷ್ಟ್ರೀಯ ಅಂಗವಿಕಲರ ಹಣಕಾಸು ಅಭಿವೃದ್ಧಿ ಸಂಸ್ಥೆಯಿಂದ ಸಾಲ ಪಡೆದು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ರಾಜ್ಯದಲ್ಲಿ ಅಂಗವಿಕಲರಿಗಾಗಿ ಸಾಲ ಸೌಲಭ್ಯ ದೊರಕಿಸಿಕೊಡಲು ಯೋಜನೆಗಳನ್ನು ಅನುಷ್ಠಾನಗೊಳಿಸಲು ಚಾನಲೈಸಿಂಗ್ ಏಜೆನ್ಸಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಮೇಲೆ ಓದಲಾದ ಕ್ರಮಾಂಕ (2)ರ ವ್ಯವಸ್ಥಾಪಕ ನಿರ್ದೇಶಕರವರ ಪತ್ರ ದಿನಾಂಕ 09-11-2009 ರಲ್ಲಿ ಸರ್ಕಾರದಿಂದ ಈ ಯೋಜನೆಗೆ ರೂ.2.00 ಕೋಟಿಗಳಿಗೆ ಗ್ಯಾರಂಟಿ ನೀಡಲಾಗಿದ್ದು, ಫಲಾನುಭವಿಗಳ ಆಯ್ಕೆಯ ಸಂಬಂಧ ತಾಲ್ಲೂಕು ಸಮಿತಿ, ಜಿಲ್ಲಾ ಸಮಿತಿ ಮತ್ತು ರಾಜ್ಯ ಮಟ್ಟದ ಸಮಿತಿಗಳನ್ನು ರಚಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಮಮಇ 81 ಮಅನಿ 2008, ಬೆಂಗಳೂರು, ದಿನಾಂಕ: 17ನೇ ಡಿಸೆಂಬರ್ 2009.

ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಯೋಜನೆಗಳ ಅನುಷ್ಠಾನದ ಸಂಬಂಧ ಈ ಕೆಳಕಂಡ ಸದಸ್ಯರನ್ನೊಳಗೊಂಡ ಜಿಲ್ಲಾ ಸಮಿತಿ, ಯೋಜನಾ ಅನುಮೋದನಾ ಸಮಿತಿ ಮತ್ತು ರಾಜ್ಯ ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ.

I. ಜಿಲ್ಲಾ ಸಮಿತಿಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡಿರುತ್ತಾರೆ :

1)	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್	–	ಅಧ್ಯಕ್ಷರು
2)	ಜಿಲ್ಲಾ ವ್ಯವಸ್ಥಾಪಕರು ಹಾಗೂ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	–	ಸದಸ್ಯ ಕಾರ್ಯದರ್ಶಿ
3)	ಪ್ರಧಾನ ವ್ಯವಸ್ಥಾಪಕರು, ಜಿಲ್ಲಾ ಕೈಗಾರಿಕಾ ಕೇಂದ್ರ	–	ಸದಸ್ಯರು
4)	ಉಪ ನಿರ್ದೇಶಕರು, ಪಶುಸಂಗೋಪನೆ ಇಲಾಖೆ	–	ಸದಸ್ಯರು
5)	ಸಹ/ಉಪ ನಿರ್ದೇಶಕರು, ಕೃಷಿ ಇಲಾಖೆ	–	ಸದಸ್ಯರು
6)	ಉಪ ನಿರ್ದೇಶಕರು, ರೇಷ್ಮೆ ಇಲಾಖೆ	–	ಸದಸ್ಯರು
7)	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು	–	ಸದಸ್ಯರು
8)	ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ	–	ಸದಸ್ಯರು
9)	ಜಿಲ್ಲಾ ಆರೋಗ್ಯ ಅಧಿಕಾರಿಗಳು	–	ಸದಸ್ಯರು
10)	ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು	–	ಸದಸ್ಯರು

ಕರ್ತವ್ಯಗಳು :

ಈ ಜಿಲ್ಲಾ ಸಮಿತಿಯ ಸದಸ್ಯ ಕಾರ್ಯದರ್ಶಿಯು ಬಂದ ಎಲ್ಲಾ ಅರ್ಜಿಗಳ ಪರಿಶೀಲನೆ ಮಾಡಿ ಸಮಿತಿಯ ಮುಂದೆ ಮಂಡಿಸುವುದು ತಾಲ್ಲೂಕು ಸಮಿತಿಯು ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ, ಅವಶ್ಯವಿದ್ದಲ್ಲಿ ಅಭ್ಯರ್ಥಿಗಳ ಸಂದರ್ಶನ ನಡೆಸಿ, ಫಲಾನುಭವಿಯು ಕೈಗೊಳ್ಳಬಹುದಾದ ಯೋಜನೆಯ ಬಗ್ಗೆ ಪರಿಶೀಲಿಸಿ ಅರ್ಹ ಎಲ್ಲಾ ಫಲಾನುಭವಿಗಳ ಹೆಸರನ್ನು ಹಾಗೂ ಮಂಜೂರು ಮಾಡಬಹುದಾದ ಸಾಲದ ಹಣವನ್ನು ವಿವರಗಳೊಂದಿಗೆ ನಿಗಮದ ಯೋಜನಾ ಅನುಮೋದನಾ ಸಮಿತಿಗೆ ಶಿಫಾರಸ್ಸು ಮಾಡುವುದು.

II. **ನಿಗಮದ ಯೋಜನಾ ಅನುಮೋದನಾ ಸಮಿತಿಯು ಈ ಕೆಳಕಂಡ ಸದಸ್ಯರನ್ನೊಳಗೊಂಡಿರುತ್ತದೆ :**

1)	ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಮ.ಅ.ನಿಗಮ	–	ಅಧ್ಯಕ್ಷರು
2)	ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ	–	ಸದಸ್ಯರು
3)	ಪ್ರಧಾನ ವ್ಯವಸ್ಥಾಪಕರು, ಕ.ರಾ.ಮ.ಅ.ನಿಗಮ	–	ಸದಸ್ಯರು
4)	ಸ್ವಯಂ ಸೇವಾ ಸಂಸ್ಥೆಯ ಒಬ್ಬರು ಪ್ರತಿನಿಧಿ	–	ಸದಸ್ಯರು

ಕರ್ತವ್ಯಗಳು :

ನಿಗಮದ ಯೋಜನಾ ಸಮಿತಿಯು ಜಿಲ್ಲಾ ಸಮಿತಿಯಿಂದ ಬಂದಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ನಿಗದಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಯಂತೆ ಫಲಾನುಭವಿಗಳನ್ನು ಆಯ್ಕೆ ಮಾಡುವುದು. ಆಯ್ಕೆ ಮಾಡಿದ ಫಲಾನುಭವಿಗಳ ವಿವರಗಳನ್ನು ಹಣ ಬಿಡುಗಡೆಗಾಗಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರಿಗೆ ಶಿಫಾರಸ್ಸು ಮಾಡುವುದು.

III. **ರಾಜ್ಯ ಮಟ್ಟದ ಸಮಿತಿಯು ಈ ಕೆಳಕಂಡ ಸದಸ್ಯರನ್ನೊಳಗೊಂಡಿರುತ್ತದೆ :**

1)	ಸರ್ಕಾರದ ಕಾರ್ಯದರ್ಶಿಯವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	–	ಅಧ್ಯಕ್ಷರು
2)	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ	–	ಸದಸ್ಯ–ಕಾರ್ಯದರ್ಶಿ
3)	ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ	–	ಸದಸ್ಯರು
4)	ಉಪ ಪ್ರಧಾನ ವ್ಯವಸ್ಥಾಪಕರು, ನಬಾರ್ಡ್	–	ಸದಸ್ಯರು

ಕರ್ತವ್ಯಗಳು :

ರಾಜ್ಯ ಮಟ್ಟದ ಸಮಿತಿಯು ಆಗಿಂದಾಗ್ಗೆ ಸಭೆ ಸೇರಿ ಯೋಜನೆಯ ಪ್ರಗತಿಯನ್ನು ಪರಿಶೀಲಿಸುವುದು, ಹಾಗೂ ರಾಷ್ಟ್ರೀಯ ನಿಗಮದಿಂದ ಸಾಲ ಪಡೆಯಲು ಕ್ರಮ ಕೈಗೊಳ್ಳುವುದು ಮತ್ತು ಯೋಜನೆಯನ್ನು ಯಶಸ್ವಿಗೊಳಿಸಲು ಮಾರ್ಗಸೂಚಿಗಳನ್ನು ರಚಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ–2,

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಪಿ.ಆರ್.56

ENERGY SECRETARIAT

Sub : Supplementary Power Purchase Agreement for M/s. Udupi Power Corporation Limited (UPCL), Nandkur village, Udupi District.

Read : (1) Letter No. UPCL/B01/2008/1153 dated 29-07-2008 of M/s UPCL

(2) Letter No. EN 15 PPC 2005 dated 3-2-2009.

(3) Letter No. F No. J – 13011/23-1-1996 – IA.II (T) dated 09-09-2009 of Ministry of Environment and Forest, Government of India.

(4) DO Letter No. PCKL/A1/12/05-06, dated 18-11-2009 of MD, KPTCL.

Preamble:

1. The Power Purchase Agreement (PPA) for the 1015 MW Coal Based Power Project of M/s. Udupi Power Corporation Limited (UPCL) was signed by the Electricity Supply Companies (ESCOMs) with M/s. UPCL on 26-12-2005. The Central Electricity Regulatory Commission (CERC) has agreed in principle Capital Cost of Rs.4299 Crores.

2. M/s UPCL vide letter read at (1) above addressed to the Chief Secretary, Government of Karnataka requested for enhancement of project capacity to 1500 MW. The Government vide letter read (2) above has accorded in principle no objection to increase the capacity for UPCL from 1015 MW to 1500 MW. The Ministry of Environment and Forests vide letter read at (3) above has given approval for 1200 MW. The plant is under construction and the first unit of 600 MW is expected to be commissioned in April-May 2010. All efforts are being made to have this capacity increase started before the end of this financial year.

3. The Managing Director, Karnataka Power Transmission Corporation Limited vide letter read at (4) above has informed that M/s.UPCL vide letter dated 26-09-2009 have sought for certain amendments to the Power Purchase Agreement (PPA) which has entered into on 26-12-2005. The revised capital cost as indicated by M/s. UPCL is now Rs.5764.394 Crores and the proposed revised tariff would be Rs.2.54 per Unit.

4. The request of the UPCL has been processed by the Committee constituted by Power Company of Karnataka Limited (PCKL) and MD, KPTCL vide letter read at (4) above, has requested the approval of the Government for the following :

1. Amendments sought by M/s. UPCL and which are recommended for approval.
2. Amendments proposed by M/s UPCL and not considered by the Committee.
3. New Clause recommended by the Committee for approval and inclusion in the PPA, but these clauses have not been agreed to by M/s. UPCL.
4. Ministry of Environment & Forests letter dated 9th September 2009.

5. When the PPA was signed in 2005, a Committee consisting of Finance, Energy and Law Secretaries had prepared a report and this was placed for the Cabinet.

6. In view of the importance of this matter and the need to ensure that the Supplementary Agreement is drawn up in an objective and transparent manner, it is proposed to constitute a Committee with the following officers.

1.	Additional Chief Secretary, Finance Department	-	Chairman
2.	Additional Chief Secretary, Energy Department	-	Member
3.	Managing Director, Karnataka Power Corporation Limited or his nominee	-	Member
4.	Secretary, Law or his nominee	-	Member

7. The Committee will process the Supplementary Power Purchase Agreement including request of UPCL and furnish its report to Government to place it before the Cabinet.

8. The matter has been examined and the following orders are issued :

GOVERNMENT ORDER NO. EN 15 PPC 2005, BANGALORE, DATED 1ST JANUARY 2010

Under the circumstances explained in the preamble and the need to ensure that the Supplementary Power Purchase Agreement for Udupi Power Project is drawn up in an objective and transparent manner, Government accords approval to constitute a Committee with the following officers :

1.	Additional Chief Secretary, Finance Department	-	Chairman
2.	Additional Chief Secretary, Energy Department	-	Member
3.	Managing Director, Karnataka Power Corporation Limited or his nominee	-	Member
4.	Secretary, Law or his nominee.	-	Member

The Committee shall process the Supplementary Power Purchase Agreement including the request of M/s. Udupi Power Corporation Limited and furnish its report to Government immediately.

By Order and in the name of the Governor of Karnataka,

S.J. SAMPATH KUMAR

Under Secretary to Government,

Energy Department

PR. 57

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡೀಮ್ಡ್ ವಿಶ್ವವಿದ್ಯಾನಿಲಯದ ಸ್ಥಾನಮಾನ ಪಡೆದಿರುವ ನಿಟ್ಟೆ ವಿಶ್ವವಿದ್ಯಾನಿಲಯದ ಸಂಸ್ಥೆಗಳಾದ ಕೆ.ಎಸ್.ಹೆಗಡೆ ಮೆಡಿಕಲ್ ಅಕಾಡೆಮಿ, ನಿಟ್ಟೆ ಉಷಾ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್, ನಿಟ್ಟೆ ಗುಲಾಬಿಶೆಟ್ಟಿ ಮೆಮೋರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಸ್ಯೂಟಿಕಲ್ ಸೈನ್ಸಸ್ ಮತ್ತು ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಫಿಸಿಯೊಥೆರಪಿ, ಮಂಗಳೂರು ಇವುಗಳ ಸಂಯೋಜನೆಯನ್ನು ಹಿಂದಕ್ಕೆ ಪಡೆಯುವ ಬಗ್ಗೆ.

ಓದಲಾಗಿದೆ :
1. ಸಂಖ್ಯೆ. NU/REG/124/2009-10, ದಿನಾಂಕ 30-10-2009
2. ಸರ್ಕಾರದ ಪತ್ರ ಸಂಖ್ಯೆ : ಆಕುಕ 271 ಎಂಪಿಎಸ್ 2009, ದಿನಾಂಕ 05-12-2009.
3. ರಾಗಾಂಆವಿವಿದ ಪತ್ರ ಸಂಖ್ಯೆ : ಆರ್‌ಪಿ/41/2009-10, ದಿನಾಂಕ 10-12-2009.
4. ರಾಗಾಂಆವಿವಿದ ಪತ್ರ ಸಂಖ್ಯೆ : ಆರ್‌ಪಿ/41/2009-10, ದಿನಾಂಕ 29-10-2009.

ಪ್ರಸ್ತಾವನೆ :

ಕುಲಸಚಿವರು, ನಿಟ್ಟೆ ವಿಶ್ವವಿದ್ಯಾನಿಲಯ, ಮಂಗಳೂರು ಇವರು ಮೇಲೆ (1) ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಕೆ.ಎಸ್.ಹೆಗಡೆ ಮೆಡಿಕಲ್ ಅಕಾಡೆಮಿ, ಮಂಗಳೂರು, ನಿಟ್ಟೆ ಉಷಾ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್, ಮಂಗಳೂರು, ನಿಟ್ಟೆ ಗುಲಾಬಿಶೆಟ್ಟಿ ಮೆಮೋರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಸ್ಯೂಟಿಕಲ್ ಸೈನ್ಸಸ್, ಮಂಗಳೂರು ಮತ್ತು ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಫಿಸಿಯೊಥೆರಪಿ, ಮಂಗಳೂರು ಸಂಸ್ಥೆಗಳನ್ನು ಸರ್ಕಾರದ ಅನುಮೋದನೆಯ ಷರತ್ತಿಗೊಳಪಟ್ಟು ಸಂಯೋಜನೆಯನ್ನು ಹಿಂದಕ್ಕೆ ಪಡೆದಿರುವ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಕ್ರಮಕ್ಕೆ ಅನುಮೋದನೆ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ನಿಟ್ಟೆ ವಿಶ್ವವಿದ್ಯಾನಿಲಯದ ಮೇಲೆ (1) ರಲ್ಲಿ ಓದಲಾದ ಪತ್ರವನ್ನು ಕಳುಹಿಸುವುದರೊಂದಿಗೆ ಕಾಯ್ದೆಯನುಸಾರ ಪರಿಶೀಲಿಸಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ಕೋರಲಾಗಿತ್ತು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯವು ಮೇಲೆ (3)ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಕೆ.ಎಸ್.ಹೆಗಡೆ ಮೆಡಿಕಲ್ ಅಕಾಡೆಮಿ, ನಿಟ್ಟೆ ಉಷಾ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್, ನಿಟ್ಟೆ ಗುಲಾಬಿಶೆಟ್ಟಿ ಮೆಮೋರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಸ್ಯೂಟಿಕಲ್ ಸೈನ್ಸಸ್, ಮಂಗಳೂರು ಮತ್ತು ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಫಿಸಿಯೊಥೆರಪಿ, ಮಂಗಳೂರು ಈ ಸಂಸ್ಥೆಗಳನ್ನು ಒಳಗೊಂಡ ನಿಟ್ಟೆ ವಿಶ್ವವಿದ್ಯಾನಿಲಯಕ್ಕೆ ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯು ಡೀಮ್ಡ್ ವಿಶ್ವವಿದ್ಯಾನಿಲಯ ಸ್ಥಾನಮಾನವನ್ನು ಕಲ್ಪಿಸಿರುವುದರಿಂದ ಸಿಂಡಿಕೇಟ್ ನಿರ್ಣಯದಂತೆ ಸದರಿ ನಾಲ್ಕು ಶಿಕ್ಷಣ ಸಂಸ್ಥೆಗಳಿಗೆ ತಾನು ನೀಡಿದ್ದ ಸಂಯೋಜನೆಯನ್ನು ಸರ್ಕಾರದ ಅನುಮೋದನೆಗೆ ಒಳಪಟ್ಟು ಮೇಲೆ (4) ರಲ್ಲಿ ಓದಲಾದ ತನ್ನ ಆದೇಶದಲ್ಲಿ ಹಿಂಪಡೆಯಲಾಗಿದೆಯೆಂದು ಪ್ರಯುಕ್ತ ಆ ಆದೇಶಕ್ಕೆ ಸರ್ಕಾರದ ಅನುಮೋದನೆಗಾಗಿ ಎಂದು ವರದಿ ಮಾಡಿದೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ಕೆ.ಎಸ್.ಹೆಗಡೆ ಮೆಡಿಕಲ್ ಅಕಾಡೆಮಿ, ನಿಟ್ಟೆ ಉಷಾ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್, ನಿಟ್ಟೆ ಗುಲಾಬಿಶೆಟ್ಟಿ ಮೆಮೋರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಸ್ಯೂಟಿಕಲ್ ಸೈನ್ಸಸ್ ಮತ್ತು ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಫಿಸಿಯೊಥೆರಪಿ, ಮಂಗಳೂರು ಈ ಸಂಸ್ಥೆಗಳ ಸಂಯೋಜನೆಯನ್ನು ಹಿಂದಕ್ಕೆ ಪಡೆದಿರುವ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಆದೇಶಕ್ಕೆ ಶೇಕಡ 25ರಷ್ಟು ಸೀಟುಗಳನ್ನು ಸರ್ಕಾರಕ್ಕೆ ಬಿಟ್ಟುಕೊಡುವ ಷರತ್ತಿಗೊಳಪಟ್ಟು ಘಟನೋತ್ತರ ಅನುಮತಿ ನೀಡಲು ಸರ್ಕಾರವು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 271 ಎಂಪಿಎಸ್ 2009, ಬೆಂಗಳೂರು, ದಿನಾಂಕ: 31ನೇ ಡಿಸೆಂಬರ್ 2009.

ಕೆ.ಎಸ್.ಹೆಗಡೆ ಮೆಡಿಕಲ್ ಅಕಾಡೆಮಿ, ಮಂಗಳೂರು, ನಿಟ್ಟೆ ಉಷಾ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್, ಮಂಗಳೂರು, ನಿಟ್ಟೆ ಗುಲಾಬಿಶೆಟ್ಟಿ ಮೆಮೋರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಸ್ಯೂಟಿಕಲ್ ಸೈನ್ಸಸ್, ಮಂಗಳೂರು ಮತ್ತು ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಫಿಸಿಯೊಥೆರಪಿ, ಮಂಗಳೂರು ಈ ಸಂಸ್ಥೆಗಳ ಸಂಯೋಜನೆಯನ್ನು ಹಿಂದಕ್ಕೆ ಪಡೆದಿರುವ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಕ್ರಮಕ್ಕೆ ಸರ್ಕಾರದ ಘಟನೋತ್ತರ ಅನುಮತಿಯನ್ನು ನೀಡಲಾಗಿದೆ.

ಈ ಅನುಮತಿಯು ನಿಟ್ಟೆ ವಿಶ್ವವಿದ್ಯಾನಿಲಯವು ತನ್ನ ಸಂಸ್ಥೆಗಳಲ್ಲಿನ ಶೇಕಡ 25ರಷ್ಟು ಸೀಟುಗಳನ್ನು ಪಿಜಿಇಟಿ/ಸಿಇಟಿ ಮೂಲಕ ಹಂಚಲು ಸರ್ಕಾರಕ್ಕೆ ಬಿಟ್ಟುಕೊಡುವ ಒಡಂಬಡಿಕೆ ಹಾಗೂ ಷರತ್ತು ಮುಂದುವರಿಕೆಗೆ ಒಳಪಟ್ಟಿರುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ವಿ. ಶ್ರೀರಾಮರೆಡ್ಡಿ

ಪಿ.ಆರ್.58

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ)

ಕಂದಾಯ ಸಚಿವಾಲಯ

ವಿಷಯ : ಕೆ.ಜಿ.ಎಫ್. ರಾಬರ್ಟ್‌ಸನ್ ಪೇಟೆ ಶ್ರೀ ಚೆಲುವ ವಿನಾಯಕಸ್ವಾಮಿ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸುವ ಬಗ್ಗೆ – ಆದೇಶ.

ಓದಲಾಗಿದೆ : ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆರವರ ಪತ್ರ ಸಂಖ್ಯೆ ಎಡಿಎಂ–3, ಏಕರೂಪ ಶಾಸನ ಸಿಆರ್.3–/2005–06, ದಿನಾಂಕ 26–02–2008.

ಪ್ರಸ್ತಾವನೆ :

ಮೇಲೆ ಓದಲಾದ ಧಾರ್ಮಿಕ ದತ್ತಿ ಆಯುಕ್ತರ ಪತ್ರ ದಿನಾಂಕ 26–02–2008 ರಲ್ಲಿ ಕೋಲಾರ ಜಿಲ್ಲೆ, ಕೆ.ಜಿ.ಎಫ್. ರಾಬರ್ಟ್‌ಸನ್ ಪೇಟೆ ಶ್ರೀ ಚೆಲುವ ವಿನಾಯಕಸ್ವಾಮಿ ದೇವಸ್ಥಾನವು 'ಸಿ' ಪ್ರವರ್ಗಕ್ಕೆ ಸೇರಿದ ಮುಜರಾಯಿ ಸಂಸ್ಥೆಯಾಗಿದ್ದು, ಅಧಿಸೂಚಿತ ಪಟ್ಟಿಯಲ್ಲಿ ಇತರೆ ಮೂರು ಸಂಸ್ಥೆಗಳೊಂದಿಗೆ ಈ ದೇವಾಲಯದ ಹೆಸರು ಕೈಬಿಟ್ಟು ಹೋಗಿರುತ್ತದೆ. ಈ ದೇವಾಲಯದ ಆಡಳಿತವನ್ನು ಸರ್ಕಾರದ ವತಿಯಿಂದ ನೇಮಿಸಿರುವ ಸಮಿತಿ ಹಾಗೂ ಆಡಳಿತಾಧಿಕಾರಿಗಳಿಂದ ನಿರ್ವಹಿಸಲಾಗುತ್ತಿದೆ. ದೇವಾಲಯಕ್ಕೆ ಸರ್ಕಾರದಿಂದ ಅಳವಡಿಸಿರುವ ಹುಂಡಿ ಹಾಗೂ ದೇವಾಲಯಕ್ಕೆ ಸೇರಿದ ಮನೆಗಳಿಂದ ಬರುವ ಬಾಡಿಗೆ ಮೂಲ ಆದಾಯವಾಗಿರುತ್ತದೆ.

ಸದರಿ ದೇವಾಲಯವನ್ನು ಖಾಸಗಿ ಮಾಡಿಕೊಳ್ಳಲು ಶ್ರೀ ಎಸ್. ರಮೇಶ್ ಎಂಬುವವರು ದುರುದ್ದೇಶ ಹೊಂದಿರುತ್ತಾರೆ. ಅಲ್ಲದೆ ಈ ಸಂಸ್ಥೆಗೆ ಸೇರಿದ ಮನೆಯನ್ನು ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದು, ಇದನ್ನು ರದ್ದುಪಡಿಸಲು ಕೆ.ಜಿ.ಎಫ್. ನಗರ ಸಭೆಗೆ ಪತ್ರಗಳನ್ನು ಬರೆಯಲಾಗಿದೆ ಹಾಗೂ ಕಛೇರಿ ಗಮನಕ್ಕೆ ಬರದಂತೆ ಒಂದು ಸಮಿತಿ ರಚಿಸಿಕೊಂಡು, ಈ ರೀತಿ ಕಾನೂನು ವಿರುದ್ಧ ಚಟುವಟಿಕೆಗಳು ನಡೆಸುತ್ತಿರುತ್ತಾರೆಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ವರದಿಯಂತೆ ರಾಬರ್ಟ್‌ಸನ್ ಪೇಟೆ ಶ್ರೀ ಚೆಲುವ ವಿನಾಯಕಸ್ವಾಮಿ ದೇವಾಲಯನ್ನು ಕರ್ನಾಟಕ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 23ರನ್ವಯ ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರ್ಪಡಿಸಿ ಆದೇಶ ಹೊರಡಿಸುವಂತೆ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆರವರು ಕೋರಿಕೆ ಸಲ್ಲಿಸಿರುತ್ತಾರೆ.

ಧಾರ್ಮಿಕ ದತ್ತಿ ಆಯುಕ್ತರವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 29 ಮುಆಬಿ 2008, ಬೆಂಗಳೂರು, ದಿನಾಂಕ: 29ನೇ ಡಿಸೆಂಬರ್ 2009.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೋಲಾರ ಜಿಲ್ಲೆ, ಕೆ.ಜಿ.ಎಫ್. ರಾಬರ್ಟ್‌ಸನ್ ಪೇಟೆ ಶ್ರೀ ಚೆಲುವ ವಿನಾಯಕಸ್ವಾಮಿ ದೇವಸ್ಥಾನವು ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನವಾಗಿರುತ್ತದೆ. ಈ ಸಂಸ್ಥೆಯ ಹೆಸರು ಅಧಿಸೂಚಿತ ಪಟ್ಟಿಯಲ್ಲಿ ಬಿಟ್ಟುಹೋಗಿರುವುದರಿಂದ ಈ ದೇವಸ್ಥಾನವನ್ನು ಕರ್ನಾಟಕ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 23ರನ್ವಯ ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ. ರಾಮಚಂದ್ರಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್.59

ವಿಷಯ : ಬಳ್ಳಾರಿ ನಗರ ವರ್ತುಲ ರಸ್ತೆ ನಿರ್ಮಾಣಕ್ಕಾಗಿ ಆಂದ್ರಾಳು, ಮುಂಡರಗಿ, ಪಿ.ಬೂದಿಹಾಳು ಮತ್ತು ಬಿ.ಗೊನಾಳು ಗ್ರಾಮಗಳ ಪಟ್ಟಾದಾರರು ಬಿಟ್ಟುಕೊಡುವ ಜಮೀನಿನ ಉಳಿದ ವಿಸ್ತೀರ್ಣವನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆಗೊಳಿಸಿಕೊಳ್ಳಲು ಭೂಪರಿವರ್ತನಾ ಶುಲ್ಕದಿಂದ ವಿನಾಯಿತಿ ನೀಡುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿಗಳು ಬಳ್ಳಾರಿ ರವರ ಪತ್ರ ಸಂಖ್ಯೆ : ಕಂ:ಭೂಪ:85/2009–10, ದಿನಾಂಕ 13–8–09 ಮತ್ತು 26–9–2009.

ಪ್ರಸ್ತಾವನೆ :

ಜಿಲ್ಲಾಧಿಕಾರಿಗಳು ಬಳ್ಳಾರಿ ಜಿಲ್ಲೆ ರವರು, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಬಳ್ಳಾರಿ ನಗರದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಗಣಿ ಚಟುವಟಿಕೆಗಳಿಂದಾಗಿ ಲಾರಿಗಳ ಸಂಚಾರ ಹೆಚ್ಚಾಗಿದ್ದು, ಸಂಚಾರಿ ವ್ಯವಸ್ಥೆ ಮತ್ತು ವಾಯು ಮಾಲಿನ್ಯದಿಂದ ಪರಿಸ್ಥಿತಿಯು ತೀರ ಹದಗೆಟ್ಟಿರುವ ಹಿನ್ನೆಲೆಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರು ಅಲ್ಲಿನ ರೈತರ ಮನ ಒಲಿಸಿ, ವರ್ತುಲ ರಸ್ತೆಗೆ ಅಗತ್ಯವಿರುವ ಪಟ್ಟಾ ಜಮೀನುಗಳನ್ನು ಸರ್ಕಾರದಿಂದ ಯಾವುದೇ ಪರಿಹಾರವನ್ನು ಕೇಳದೆ ಉಚಿತವಾಗಿ ನೀಡಲು ಪಟ್ಟಾದಾರರನ್ನು ಒಪ್ಪಿಸಲಾಗಿದೆ ಎಂಬುದಾಗಿ ವರದಿ ಮಾಡುತ್ತಾ, ರೈತರೊಡನೆ ನಡೆಸಿದ ಸಂಧಾನದಲ್ಲಿ ವರ್ತುಲ ರಸ್ತೆಗಾಗಿ ಜಮೀನು

ಬಿಟ್ಟುಕೊಟ್ಟಿರುವ ಪಟ್ಟಾದಾರರು/ರೈತರು ಈ ಕೆಳಕಂಡ ಬೇಡಿಕೆಯನ್ನು ಈಡೇರಿಸುವಂತೆ ಕೋರಿರುತ್ತಾರೆಂದು ವರದಿ ಮಾಡಿರುತ್ತಾರೆ.

1) ವರ್ತುಲ ರಸ್ತೆಗಾಗಿ ಬಿಟ್ಟುಕೊಡುವ ಜಮೀನುಗಳ ಪೈಕಿ ಉಳಿದಿರುವ ವಿಸ್ತೀರ್ಣವನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆಗೊಳಿಸಿಕೊಳ್ಳಲು ಭೂಪರಿವರ್ತನಾ ಶುಲ್ಕದಿಂದ ವಿನಾಯಿತಿ ನೀಡುವುದು.

2) ಒಂದು ವೇಳೆ ಸದರಿ ಜಮೀನುಗಳ ಭೂಪರಿವರ್ತನೆ ಕೋರುವ ಉದ್ದೇಶಕ್ಕೆ ವಿರುದ್ಧವಾಗಿ ಉಪಯೋಗಕ್ಕೆ ಕಾಯ್ದಿರಿಸಿದಲ್ಲಿ, ಸರ್ಕಾರದ ವತಿಯಿಂದ ಭೂ ಉಪಯೋಗ ಬದಲಾವಣೆ ಮಾಡಿಸಿಕೊಡುವುದು.

2. ಬಳ್ಳಾರಿ ವರ್ತುಲ ರಸ್ತೆಗಾಗಿ ಸರ್ಕಾರಕ್ಕೆ ಉಚಿತವಾಗಿ ಬಿಟ್ಟುಕೊಟ್ಟಿರುವ ಜಮೀನುಗಳ ವಿವರ, ಭೂಪರಿವರ್ತನೆಗೆ ಕೋರಿರುವ ವಿಸ್ತೀರ್ಣ, ಸರ್ಕಾರಕ್ಕೆ ಬಿಟ್ಟುಕೊಟ್ಟ ಜಮೀನಿನ ಮಾರ್ಗಸೂಚಿ ದರ ಮತ್ತು ಪ್ರಚಲಿತ ಮಾರುಕಟ್ಟೆ ದರ ಹಾಗೂ ಭೂ ಪರಿವರ್ತನೆ ಶುಲ್ಕ ಮನ್ನಾ ಮಾಡಲು ಪರಿಗಣಿಸಬೇಕಾಗಿರುವ ಮೊತ್ತ ಇವುಗಳ ವಿವರಗಳು ಈ ಕೆಳಕಂಡಂತಿರುತ್ತದೆ.

ಬಳ್ಳಾರಿ ವರ್ತುಲ ರಸ್ತೆಗೆ ಸರ್ಕಾರಕ್ಕೆ ಉಚಿತವಾಗಿ ಜಮೀನು ಬಿಟ್ಟುಕೊಟ್ಟ ಮಾಹಿತಿ ಮತ್ತು ಇತರೇ ಮಾಹಿತಿ									
ಜಮೀನಿನ ವಿವರ									
ಕ್ರ. ಸಂ	ಗ್ರಾಮದ ಹೆಸರು	ಪಟ್ಟಾ ದಾರರ ಸಂಖ್ಯೆ	ಒಟ್ಟು ವಿಸ್ತೀರ್ಣ ಎಕರೆ ಗಳಲ್ಲಿ	ವರ್ತುಲ ರಸ್ತೆಗೆ ಉಚಿತವಾಗಿ ಜಮೀನು ಬಿಟ್ಟುಕೊಟ್ಟ ವಿಸ್ತೀರ್ಣ	ಉಳಿದ/ ಭೂಪರಿವರ್ತನೆಗೆ ಕೋರಬಹುದಾದ ವಿಸ್ತೀರ್ಣ	ಸರ್ಕಾರಕ್ಕೆ ಬಿಟ್ಟುಕೊಟ್ಟ ಜಮೀನು		ಭೂಪರಿವರ್ತನೆ ಶುಲ್ಕ ರೂ.	
						ಮಾರ್ಗ ಸೂಚಿ ಬೆಲೆ	ಪ್ರಚಲಿತ ಮಾರುಕಟ್ಟೆ ಬೆಲೆ	ವಸತಿ	ವಸತಿಯೇತರ
1	2	3	4	5	6	7	8	9	10
1	ಅಂದ್ರಾಳು ಗ್ರಾಮ	24	85.41	11.02	74.39	120833.000	2500000.00	2430125.00	4860250.00
2	ಮುಂಡರಗಿ ಗ್ರಾಮ	18	80.99	10.32	70.67	300000.000	3500000.00	2308603.00	4617205.00
3	ಪಾತ್ರಬೂದಿಹಾಳ್ ಗ್ರಾಮ	9	39.79	7.93	31.86	150000.000	3000000.00	1040783.00	2081565.00
4	ಬಿ.ಗೋನಾಳ್ ಗ್ರಾಮ	25	63.56	9.21	54.35	250000.000	3000000.00	1775472.00	3550943.00
	ಒಟ್ಟು	**76**	**269.75**	**38.48**	**231.27**	**820833.000**	**12000000.00**	**7554983.00**	**15109963.00**

3) ಜಮೀನುಗಳ ಪಟ್ಟಾದಾರರು ಒಟ್ಟು 38.48 ಎ/ಗು ಜಮೀನನ್ನು ಸರ್ಕಾರಕ್ಕೆ ಬಿಟ್ಟು ಕೊಟ್ಟಿರುತ್ತಾರೆ. ಇದರ ಮೌಲ್ಯ ರೂ.1,20,000,000/- ಆಗಿದ್ದು ಉಳಿದ ಜಮೀನು 231.27 ಎ/ಗು ಆಗಿರುತ್ತದೆ. ಒಡಂಬಡಿಕೆಯಂತೆ ಭೂ ಪರಿವರ್ತನೆಗೊಳಿಸಲು ಶುಲ್ಕ ವಿನಾಯಿತಿ ನೀಡಲು ಪ್ರಸ್ತಾವನೆ ಸಲ್ಲಿಸಲಾಗಿದ್ದು, ಇದಕ್ಕೆ ಪ್ರಚಲಿತ ವಸತಿಯೇತರ ಭೂ ಪರಿವರ್ತನೆ ದರದಂತೆ ಒಟ್ಟು ರೂ.1,51,09,963/-ಗಳ ವಿನಾಯಿತಿ ನೀಡಬೇಕಾಗುತ್ತದೆ.

4) ಕರ್ನಾಟಕ ಭೂಕಂದಾಯ ನಿಯಮಗಳು 1966 ರ ನಿಯಮ 108 ರನ್ವಯ ಕೆಲವು ಪ್ರಕರಣಗಳಲ್ಲಿ ಭೂಪರಿವರ್ತನಾ ಶುಲ್ಕ ಪಾವತಿಸುವಿಕೆಯಿಂದ ವಿನಾಯಿತಿ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ ಈ ಪ್ರಕರಣವು ನಿಯಮ 108 ರಲ್ಲಿ ಅವಕಾಶ ಕಲ್ಪಿಸಿರುವ ಪ್ರಕರಣಗಳಲ್ಲಿ ಒಂದಾಗಿರುವುದಿಲ್ಲ. ಆದರೆ ಬಳ್ಳಾರಿ ವರ್ತುಲ ರಸ್ತೆ ನಿರ್ಮಾಣವು ಒಂದು ಸಾರ್ವಜನಿಕ ಉದ್ದೇಶವನ್ನೊಳಗೊಂಡಿದ್ದು, ವರ್ತುಲ ರಸ್ತೆ ನಿರ್ಮಾಣಕ್ಕಾಗಿ ಅಲ್ಲಿನ ಪಟ್ಟಾದಾರರು ತಮ್ಮ ಜಮೀನನ್ನು ಉಚಿತವಾಗಿ ಬಿಟ್ಟುಕೊಡುವುದಕ್ಕೆ ಒಪ್ಪಿಗೆ ನೀಡಿರುವುದರಿಂದ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಬೀಳುವ ಸಾಧ್ಯತೆ ಇರುವುದಿಲ್ಲ.

ಆದ್ದರಿಂದ, ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 31 : ಎಲ್‌ಜಿಇ 2009, ಬೆಂಗಳೂರು, ದಿನಾಂಕ: 30ನೇ ಡಿಸೆಂಬರ್ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬಳ್ಳಾರಿ ನಗರದಲ್ಲಿನ ವರ್ತುಲ ರಸ್ತೆ ನಿರ್ಮಾಣಕ್ಕಾಗಿ ಅಂದ್ರಾಳು, ಮುಂಡರಗಿ, ಪಿ.ಬೂದಿಹಾಳು ಮತ್ತು ಬಿ.ಗೊನಾಳು ಗ್ರಾಮಗಳ ಪಟ್ಟಾದಾರರು ಉಚಿತವಾಗಿ ಬಿಟ್ಟುಕೊಟ್ಟಿರುವ ಒಟ್ಟು

ವಿಸ್ತೀರ್ಣ 38.48 ಎಕರೆಗೆ ಯಾವುದೇ ರೀತಿಯ ಪರಿಹಾರವನ್ನು ಭವಿಷ್ಯದಲ್ಲಿ ಕ್ಲೈಮ್ ಮಾಡಬಾರದೆಂಬ ಷರತ್ತಿಗೊಳಪಟ್ಟು, ಕರ್ನಾಟಕ ಭೂಕಂದಾಯ ನಿಯಮಗಳು 1966ರ ನಿಯಮ 108ನ್ನು ಸಡಿಲಿಸಿ, ಪಟ್ಟಾದಾರರ ಉಳಿದ 231.27 ಎಕರೆ ಜಮೀನಿಗೆ ವಸತಿಯೇತರ ಭೂ ಪರಿವರ್ತನಾ ಶುಲ್ಕ ರೂ.1,51,09,963/-ರೂ.ಗಳ (ಒಂದು ಕೋಟಿ ಐವತ್ತೊಂದು ಲಕ್ಷದ ಒಂಬತ್ತು ಸಾವಿರ ಒಂಭೈನೂರ ಅರವತ್ತಮೂರು ರೂಪಾಯಿಗಳು ಮಾತ್ರ) ಪಾವತಿಸುವಿಕೆಯಿಂದ ವಿನಾಯ್ತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಎಫ್‌ಡಿ 116 ವೆಚ್ಚ 7/2009, ದಿನಾಂಕ 23-11-2009ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಕೆ. ನರಸಿಂಹಲು,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಮಂಜೂರಾತಿ-3)

ಪಿ.ಆರ್.60

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಮೈಸೂರು ನಗರಕ್ಕೆ ಪರ್ಯಾಯವಾಗಿ ಉಪನಗರಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯನ್ನು ಘೋಷಿಸುವ ಬಗ್ಗೆ.

ಓದಲಾಗಿದೆ : ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಬೆಂಗಳೂರು ರವರು ಕಡತ ಸಂಖ್ಯೆ. ನಆಇ 431 ಮೈಅಪ್ರಾ 2009, ದಿನಾಂಕ 1-10-2009 ರಲ್ಲಿ ನೀಡಿರುವ ಅಭಿಪ್ರಾಯ.

ಪ್ರಸ್ತಾವನೆ :

ಮೇಲೆ ಓದಲಾದ ಕಡತದಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಬೆಂಗಳೂರು ಇವರು ಮೈಸೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ಸೇರಿಸಬೇಕಾದ ಜಯಪುರ ಹೋಬಳಿಯ (3) ಗ್ರಾಮದ ವಿಸ್ತೀರ್ಣ ಹಾಗೂ ಇಲವಾಲ ಹೋಬಳಿಯ (4) ಗ್ರಾಮಗಳ ವಿಸ್ತೀರ್ಣಗಳ ಯಾದಿ ಹಾಗೂ ವಿಸ್ತರಿಸಲು ಉದ್ದೇಶಿಸಿರುವ ಪ್ರದೇಶವನ್ನು ಒಳಗೊಂಡಿರುವ ನಕ್ಷೆಯನ್ನು ಹಾಗೂ ಮೈಸೂರು ನಗರದ ಮಹಾ ಯೋಜನೆಯ ಪರಿಷ್ಕರಣೆಯ ಕಾರ್ಯವು ಪ್ರಗತಿಯಲ್ಲಿರುವುದರಿಂದ, ಸದರಿ ನಗರಕ್ಕೆ ಪರ್ಯಾಯವಾಗಿ 3 ಉಪ ನಗರಗಳನ್ನು ನಿರ್ಮಾಣ ಮಾಡಲು ಪ್ರಾಧಿಕಾರವು ಉದ್ದೇಶಿಸಿರುವುದರಿಂದ ಹಾಲಿ ಇರುವ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸುವುದು ಅವಶ್ಯಕವಾಗಿರುವುದರಿಂದ ನಗರಾಭಿವೃದ್ಧಿ ಪ್ರಾಧಿಕಾರವು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಮೈಸೂರು ನಗರವು ಕರ್ನಾಟಕ ರಾಜ್ಯದ ಎರಡನೇ ಮುಖ್ಯ ನಗರ ಕೇಂದ್ರವಾಗಿದ್ದು, ರಾಜಧಾನಿ ಬೆಂಗಳೂರಿನಿಂದ 140 ಕಿ.ಮೀ. ದೂರದಲ್ಲಿದ್ದು, ಈ ನಗರವು ಪ್ರವಾಸೋದ್ಯಮ, ವಿದ್ಯಾಭ್ಯಾಸ ಹಾಗೂ ಆಡಳಿತಕ್ಕೆ ಕೇಂದ್ರ ಬಿಂದುವಾಗಿರುತ್ತದೆ. ಪ್ರಸ್ತುತ ಮೈಸೂರು ನಗರದ ಬೆಳವಣಿಗೆಯು ಒಂದು ಪ್ರಮುಖವಾದ ಘಟ್ಟವಾಗಿರುತ್ತದೆ. ಮುಂಬರುವ ದಿನಗಳಲ್ಲಿ ನಗರದ ಬೆಳವಣಿಗೆಯನ್ನು ನಿಯಂತ್ರಿಸುವುದು ಅಸಾಧ್ಯವಾಗುವುದಲ್ಲದೇ, ಯೋಜನಾಬದ್ಧವಲ್ಲದ ಬೆಳವಣಿಗೆಗೆ ಪೂರಕವಾದ ಚಟುವಟಿಕೆಗಳಿಗೆ ಆಸ್ಪದ ನೀಡಿದಂತಾಗುತ್ತದೆ.

ಮೈಸೂರು ಹಾಗೂ ಬೆಂಗಳೂರು ನಗರಗಳ ನಡುವೆ ಚತುಷ್ಪಥ ರಸ್ತೆ ಕಾರ್ಯನಿರತವಾಗಿದ್ದು, ಬಿ.ಎಂ.ಐ.ಸಿ. ಯೋಜನೆ ಹಾಗೂ ಬೆಂಗಳೂರು ರೈಲ್ವೆ ಮಾರ್ಗದ ದ್ವಿಮುಖ (Double tract) ಯೋಜನೆಯು ಪೂರ್ಣಗೊಂಡಲ್ಲಿ ಮುಂಬರುವ ದಿನಗಳಲ್ಲಿ ಮೈಸೂರು ನಗರವು ತೀವ್ರಗತಿಯಲ್ಲಿ ಬೆಳೆಯುವ ಸಾಧ್ಯತೆಯಿದ್ದು, ಈ ಹಂತದಲ್ಲಿ ನಗರದ ಯೋಜಿತ ಬೆಳವಣಿಗೆ, ಅಭಿವೃದ್ಧಿಗೆ ಹಾಗೂ ನಿರ್ವಹಣೆಗೆ ಎಲ್ಲಾ ರೀತಿಯ ಮುಂಜಾಗರೂಕತೆಯ ಕಾರ್ಯನೀತಿಗಳನ್ನು ರೂಪಿಸುವುದು ಅವಶ್ಯಕವಾಗಿರುತ್ತದೆ. ಇದಲ್ಲದೆ ಮೈಸೂರು ನಗರದ ಹಾಲಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಹೊಂದಿಕೊಂಡಂತೆ ಹೊರ ಭಾಗದ ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗಳಲ್ಲಿ ತೀವ್ರವಾದ ಬೆಳವಣಿಗೆಗಳು ಬರುತ್ತಿದ್ದು ಅವುಗಳನ್ನು ನಿಯಂತ್ರಿಸುವುದೂ ಸಹ ಅತ್ಯವಶ್ಯಕವಾಗಿರುವುದರಿಂದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಪ್ರಸಾವನೆ ಹಾಗೂ ಮೇಲ್ಕಂಡ ಅಂಶಗಳನ್ನು ಗಮನಿಸಿದಲ್ಲಿ ಹಾಲಿ ಇರುವ ಮೈಸೂರು ನಗರದ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4(ಎ)(1) ರನ್ವಯ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲು ಶಿಫಾರಸು ಮಾಡಿರುತದೆ.

ಪ್ರಸ್ತಾವನೆಯನ್ನು ಕೂಲಂಕೆಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಆಇ 431 : ಮೈಅಪ್ರಾ 2009, ಬೆಂಗಳೂರು, ದಿನಾಂಕ: 24ನೇ ಡಿಸೆಂಬರ್ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಮೈಸೂರು ನಗರದ ಹಾಲಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅನುಬಂಧ-1 ರಲ್ಲಿ ತೋರಿಸಿರುವಂತೆ (7) ಗ್ರಾಮಗಳನ್ನು ಸೇರಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4(ಎ)(1) ರನ್ವಯ ಮೈಸೂರು ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸಿ ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ.ಟಿ. ನಾರಾಯಣಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಪಿ.ಆರ್.61

ಅನುಬಂಧ-1

ಕ್ರ.ಸಂ.	ಹೋಬಳಿ	ಗ್ರಾಮದ ಹೆಸರು	ವಿಸ್ತೀರ್ಣ
1	ಜಯಪುರ	1) ಧನಗಳ್ಳಿ 2) ದಾರಿಪುರ 3) ಬರಡನಪುರ	1531 ಎಕರೆ 16 ಗುಂಟೆ 723 ಎಕರೆ 14 ಗುಂಟೆ 787 ಎಕರೆ 22 ಗುಂಟೆ
2	ಇಲವಾಲ	1) ನಾಗವಾಲ 2) ಕಮರಹಳ್ಳಿ 3) ಮಾಣಿಕ್ಯಪುರ 4) ಬೊಮ್ಮೇನಹಳ್ಳಿ	2287 ಎಕರೆ 23 ಗುಂಟೆ 748 ಎಕರೆ 39 ಗುಂಟೆ 521 ಎಕರೆ 1700 ಎಕರೆ 20 ಗುಂಟೆ

ಸಿ.ಟಿ. ನಾರಾಯಣಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿನ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ತಾಂತ್ರಿಕ ಕೋಶದ ಹಿರಿಯ ನಿರ್ದೇಶಕರ ಹುದ್ದೆಯನ್ನು ಉನ್ನತೀಕರಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ ಡಿಇಇ 77, ಇಎನ್‌ವಿ 86, ದಿನಾಂಕ 4-12-1986
2. ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 28, ಎಸ್‌ಇಎಂ 88, ದಿನಾಂಕ 25-5-1988
3. ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 211, ಸಅಸೇ 2001, ದಿನಾಂಕ 6-2-2004
4. ಕಡತ ಸಂಖ್ಯೆ ಅಪಜೀ 69, ಇಪಿಸಿ 2008.

ಪ್ರಸ್ತಾವನೆ :

ಮೇಲೆ (1) ಮತ್ತು (2) ರಲ್ಲಿ ಓದಲಾದ ಸರ್ಕಾರಿ ಆದೇಶಗಳಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ತಾಂತ್ರಿಕ ಕೋಶಕ್ಕೆ ಇತರ ಹುದ್ದೆಗಳೊಡನೆ ನಿರ್ದೇಶಕರು (ತಾಂತ್ರಿಕ) ಈ ಹುದ್ದೆಯನ್ನು ಸೃಜಿಸಲಾಗಿತ್ತು, ತರುವಾಯ ಮೇಲೆ (3)ರಲ್ಲಿ ಓದಲಾದ ದಿನಾಂಕ 6-2-2004ರ ಆದೇಶದಲ್ಲಿ ಡಾ॥ ಎಂ.ಹೆಚ್. ಬಾಲಕೃಷ್ಣಯ್ಯ, ನಿರ್ದೇಶಕರು (ತಾಂತ್ರಿಕ) ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರಿಗೆ ಬಡ್ತಿ ನೀಡಿ ಸದರಿ ಹುದ್ದೆಯನ್ನು ಹಿರಿಯ ನಿರ್ದೇಶಕರು (ತಾಂತ್ರಿಕ) ಎಂದು ಉನ್ನತೀಕರಿಸಲಾಗಿತ್ತು. ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯು ಮೇಲೆ (4)ರಲ್ಲಿ ಓದಲಾದ ತನ್ನ ಕಡತದಲ್ಲಿ ಸದರಿ ಹುದ್ದೆಯನ್ನು ವಿಶೇಷ ನಿರ್ದೇಶಕರ ಹುದ್ದೆಗೆ ಉನ್ನತೀಕರಿಸುವಂತೆ ಕೋರಿದೆ. ಈ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 772 ಸಅಸೇ 2008, ಬೆಂಗಳೂರು, ದಿನಾಂಕ: 2ನೇ ಜನವರಿ 2010.

ಕರ್ನಾಟಕ ಸರ್ಕಾರ ಸಚಿವಾಲಯದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ತಾಂತ್ರಿಕ ಕೋಶದಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ನಿರ್ದೇಶಕರು (ತಾಂತ್ರಿಕ) ಹುದ್ದೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಿಶೇಷ ನಿರ್ದೇಶಕರು (ತಾಂತ್ರಿಕ) ಎಂದು ಉನ್ನತೀಕರಿಸಿ, ಈ ಹುದ್ದೆಯ ವೇತನ ಶ್ರೇಣಿಯನ್ನು ರೂ. **28275-675-30300-750-34800-850-39900** ಕ್ಕೆ ನಿಗದಿಪಡಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ತನ್ನ ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 1797 ಸೇವೆಗಳು-3/2009, ದಿನಾಂಕ 2-12-2009 ರಲ್ಲಿ ಮತ್ತು ಸಿ.ಆ.ಸು.ಇ. (ಸೇವಾ ನಿಯಮ) ವಿಭಾಗವು ತನ್ನ ಅನಧಿಕೃತ ಟಿಪ್ಪಣಿ ಸಂಖ್ಯೆ ಸಿಆಸುಇ 37 ಸೇನಿಡಿ 2009, ದಿನಾಂಕ 14-12-2009 ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸು ಇಲಾಖೆ (ಸೇವೆಗಳು-3).

ಪಿ.ಆರ್.62

HEALTH AND FAMILY WELFARE SECRETARIAT

Sub : Providing consultancy services for Internal Audit of Karnataka Health System Development & Reform Project (IDA Credit 4229-IN) for 2009-10-reg.

Read: **Govt. Order No. HFW (PR) 43 WBA Bangalore, dated 28.02.2009.**

Preamble:

In the G.O. read above, approval was accorded for engaging the services of Roy Ghosh & Associates, Chartered Accountants, Howrah for conducting Internal Audit of the World Bank assisted Karnataka Health System Development & Reform Project (IDA Credit 4229-IN) for 2008-09.

It was decided to continue the Internal Audit for 2009-10 also. In the May 2009 Implementation Support Mission taken up by the World Bank, it was agreed that Internal Auditors for 2009-10 would be selected by using the list of Bangalore based Chartered Accountants (CAs) on the Comptroller and Auditor General (C & AG) panel for major audits. Accordingly, Expression of interest (EoI) dated 15.7.2009 was issued to 17 CA firms on the C & AG list for which responses were received from 12 firms within the prescribed date & time. After evaluating the responses in accordance with the stipulated criteria, ranking list of the responding firms was prepared and Letter of Invitation (LoI) dated 19.9.2009 was issued to the first six ranked CA firms seeking technical and financial bids for the assignment. None of the three technical bids received for the LoI dated 19.9.2009 failed to qualify technically by securing the minimum stipulated marks of 75.

Subject was once again discussed at the October 2009 Implementations Support Mission taken up by the World Bank. To expedite the process of appointment of Internal Auditor for 2009-10, it was agreed that LoI may be issued to the next six CA firms who had responded to the EoI dated 15.7.2009 and Fixed Budget Selection (FBS) method may be followed for engaging the services of the CA firm. Budget of Rs. 3.80 lakhs was approved for the assignment. LoI dated 21.10.2009 was issued to the next six CA firms of which two responded. Technical evaluation of the bids was done as per the stipulated criteria and both the bids were found to qualify technically with Patel Mohan Ramesh & Co., Chartered Accountants, Bangalore obtaining T 1 rank and S.R.R.K. Sharma Associates, Chartered Accountants, Bangalore obtaining T 2 rank.

As per the FBS method of selection, firm which has secured the highest technical ranking and submitted financial bid within the approved budget is to be selected. Patel Mohan Ramesh & Co., Chartered Accountants, Bangalore technically ranked the highest of the two bidders have submitted financial bid of Rs. 3.60 lakhs with service tax being extra, as applicable and the bid is found to be acceptable. Accordingly, they are eligible to be appointed as Project Internal Auditors for 2009-10.

Hence the following order.

Government Order No. HFW (PR) 145 2009 Bangalore, Dated 29th December 2009

In the circumstances mentioned in the preamble, approval is accorded for appointment of Patel Mohan Ramesh & Co., Chartered Accountants, Bangalore as Project Internal Auditors for the year 2009-10, on a remuneration of Rs. 3,60,000-00 (Rupees three lakhs sixty thousand only) (inclusive of all expenses) + Service Tax, as applicable.

The Chartered Accountant firm shall enter into a contract with the Project which shall include Terms of Reference (ToR) with personnel and reporting obligations.

The above expenditure towards this consultancy shall be debitable to Head of account "2210-06-800-0-84 KHSDRP Project Management and Evaluation – EAP – 051".

By order and in the name of the Governor of Karnataka,
(M. Shashidhar)
Deputy Secretary to Government,
KHSDRP
Health & Family Welfare Department.

PR. 31

ಶಿಕ್ಷಣ ಸಚಿವಾಲಯ

ತಿದ್ದುಪಡಿ ಆದೇಶ

ವಿಷಯ: ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ದುರಸ್ತಿ ಹಾಗೂ ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡಿದ ಆದೇಶಕ್ಕೆ ತಿದ್ದುಪಡಿ ಮಾಡುವ ಬಗ್ಗೆ.

ಉಲ್ಲೇಖ:ದಿನಾಂಕ 17-11-2009ರ ಆದೇಶ ಸಂಖ್ಯೆ: ಇಡಿ 216 ಯೋಸಕ 2009, (ಇಡಿ 143 ಸ್ವೀಮರ (ಯುನಿಕ್) 2009, ದಿನಾಂಕ: 17-11-2009).

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರಿ ಆದೇಶದ ಅನುಬಂಧ-1 ರಲ್ಲಿ ತೋರಿಸಿರುವ ಶಿರಸಿ ತಾಲ್ಲೂಕಿನ

ಕ್ರ.ಸಂ.	ಶಾಲೆಯ ಹೆಸರು	ಅಂದಾಜು ಮೊತ್ತ (ಲಕ್ಷಗಳಲ್ಲಿ)
14	ಹಿ. ಪ್ರಾ.ಶಾಲೆ, ಶಿರಸಿ ಪಂಚಲಿಂಗ	8.00
15	ಹಿ.ಪ್ರಾ.ಶಾಲೆ, ಶಿರಸಿ ಬೆಣವಾಂವ	6.00

ಎಂಬುದಕ್ಕೆ ಬದಲಾಗಿ

ಕ್ರ.ಸಂ.	ಶಾಲೆಯ ಹೆಸರು	ಅಂದಾಜು ಮೊತ್ತ (ಲಕ್ಷಗಳಲ್ಲಿ)
14	ಸ.ಹಿ.ಪ್ರಾಶಾಲೆ, ಶಿರಸಿ ಪಂಚಲಿಂಗ	0.80
15	ಸ.ಹಿ.ಪ್ರಾಶಾಲೆ, ಶಿರಸಿ ಬೆಣವಾಂವ	0.60
15ಎ	ಸ.ಹಿ.ಪ್ರಾ.ಶಾಲೆ, ಶಿರಸಿ ಬರೂರು 3 ಕೊಠಡಿ ನಿರ್ಮಾಣ	12.60

ಎಂದೂ,

ಅನುಬಂಧ-2ರಲ್ಲಿನ ಯಲ್ಲಾಪುರ ತಾಲ್ಲೂಕಿನ

ಕ್ರ.ಸಂ.	ಶಾಲೆಯ ಹೆಸರು	ಅಂದಾಜು ಮೊತ್ತ (ಲಕ್ಷಗಳಲ್ಲಿ)
1	ಹಿ.ಪ್ರಾ.ಶಾಲೆ, ಜಯಂತಿ ನಗರ	4.20
3	ಹಿ.ಪ್ರಾಶಾಲೆ, ಉಮ್ಮಚಗಿ	4.20
4	ಹಿ.ಪ್ರಾಶಾಲೆ, ಚೆನ್ನಾಪುರ	4.20

ಎಂಬುದಕ್ಕೆ ಬದಲಾಗಿ

ಕ್ರ.ಸಂ.	ಶಾಲೆಯ ಹೆಸರು	ಅಂದಾಜು ಮೊತ್ತ (ಲಕ್ಷಗಳಲ್ಲಿ)
1	ಸ.ಹಿ.ಪ್ರಾಶಾಲೆ, ಗುಳ್ಳಾಪುರ (1 ಕೊಠಡಿ)	4.20
3	ಸ.ಹಿ.ಪ್ರಾಶಾಲೆ, ಯಲ್ಲಾಪುರ (1 ಕೊಠಡಿ)	4.20
4	ಹಿ.ಪ್ರಾಶಾಲೆ, ದೇಹಳ್ಳಿ (1 ಕೊಠಡಿ)	4.20

ಎಂಬುದಾಗಿ ತಿದ್ದಿ ಓದಿಕೊಳ್ಳತಕ್ಕದ್ದು.

ಉಳಿದ ಅಂಶಗಳು ಯಥಾವತ್ತಾಗಿ ಮುಂದುವರಿಯುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಐ.ಎಫ್. ಮಾಗಿ)

ಪಿ.ಆರ್. 32

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ ಶಿಕ್ಷಣ ಇಲಾಖೆ (ಯೋಜನೆ)

ಶಿಕ್ಷಣ ಸಚಿವಾಲಯ

ವಿಷಯ : 2009-10ನೇ ಸಾಲಿನಲ್ಲಿ ವಿವಿಧ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ವಿವಿಧ ಪೀಠೋಪಕರಣಗಳನ್ನು ಖರೀದಿ ಮಾಡುವುದಕ್ಕೆ ಸರ್ಕಾರದ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : 1) ಕಡತ ಸಂಖ್ಯೆ: ಡಿಟಿಇ 272 ಎಸ್.ಪಿ.ಎಸ್. (2) 2009

ಪ್ರಸ್ತಾವನೆ:

2009-10ನೇ ಸಾಲಿನಲ್ಲಿ ವಿವಿಧ ಸ್ಥಳಗಳಲ್ಲಿ ಹೊಸದಾಗಿ ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭ ಮಾಡಲಾಗಿದೆ. ಈ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಪೀಠೋಪಕರಣಗಳು. ಅಂದರೆ ಕೊಠಡಿಗಳಿಗೆ ಡೆಸ್ಕ್‌ಗಳು, ಕಛೇರಿ ಪೀಠೋಪಕರಣಗಳು. ಗ್ರಂಥಾಲಯಕ್ಕೆ ಬೇಕಾಗುವ ಪೀಠೋಪಕರಣಗಳು ಮತ್ತು ಲ್ಯಾಬ್‌ಗಳಿಗೆ ಬೇಕಾಗುವ ಕಂಪ್ಯೂಟರ್ ಛೇರ್ ಮತ್ತು ಟೇಬಲ್‌ಗಳನ್ನು ತುರ್ತಾಗಿ ಖರೀದಿಸಬೇಕೆಂದು ತಾಂತ್ರಿಕ ನಿರ್ದೇಶಕರು ಪ್ರಸ್ತಾಪಿಸಿರುತ್ತಾರೆ.

ಇಲಾಖಾ ಮುಖ್ಯಸ್ಥರಿಗೆ ಇಡಿ 131 ಟಿಪಿಇ 98 ದಿನಾಂಕ 19-12-2002ರಲ್ಲಿನ ಪ್ರತ್ಯಾಯೋಜನೆ ಅಧಿಕಾರದನ್ವಯ ಒಂದು ಪ್ರಸ್ತಾವನೆಗೆ ರೂ. 20,000-00ಗಳ ಮಿತಿಯಲ್ಲಿ ಖರೀದಿ ಮಾಡಲು ಮಾತ್ರ ತಿಳಿಸಲಾಗಿದೆ. 2008-09ನೇ ಸಾಲಿನಲ್ಲಿ ಪ್ರಾರಂಭ ಮಾಡಿರುವ ಹೊಸ ಪಾಲಿಟೆಕ್ನಿಕ್‌ಗಳಿಗೆ ಪೀಠೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯುವುದರಿಂದ ಅದು ಸರ್ಕಾರಕ್ಕೆ ಅನಗತ್ಯ ಹೊರೆಯಾಗುತ್ತದೆ. ಪಾಲಿಟೆಕ್ನಿಕ್ ಕಾಲೇಜುಗಳಿಂದ ಬಂದಿರುವ ಪೀಠೋಪಕರಣಗಳ ಖರೀದಿ ಪ್ರಸ್ತಾವನೆಗಳನ್ನು ಕ್ರೋಢೀಕರಿಸಿ ಒಟ್ಟು ರೂ. 49,61,121-00 ಮೊತ್ತವನ್ನು 2009-10ನೇ ಸಾಲಿನ ರಾಜ್ಯ ಯೋಜನಾ ಲೆಕ್ಕ ಶೀರ್ಷಿಕೆ "2203-00-105-0-01-051" (ಸಾಮಾನ್ಯ ವೆಚ್ಚ) ಅಡಿ ಭರಿಸಲು ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ : ಇಡಿ 340 ಯೋಸಕ 2009, ಬೆಂಗಳೂರು ದಿನಾಂಕ 29-12-2009.

ರಾಜ್ಯದ ವಿವಿಧ ಸ್ಥಳಗಳಲ್ಲಿ ಹೊಸದಾಗಿ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಡೆಸ್ಕ್‌ಗಳು, ಕಂಪ್ಯೂಟರ್ ಛೇರ್, ಟೇಬಲ್, ಕಛೇರಿ ಪೀಠೋಪಕರಣಗಳನ್ನು ಖರೀದಿಸಲು ಇಲಾಖಾ ಮುಖ್ಯಸ್ಥರಿಗೆ ನೀಡಿರುವ ಆರ್ಥಿಕ ಅಧಿಕಾರದ ಮಿತಿಯನ್ನು ಸಡಿಲಗೊಳಿಸಿ ಲೆಕ್ಕಶೀರ್ಷಿಕೆ 2203-00-105-0-01-051" (ಸಾಮಾನ್ಯ ವೆಚ್ಚ) ರೂ. 49,61,000-00 ಲಕ್ಷ ಮೊತ್ತದ ಪೀಠೋಪಕರಣಗಳನ್ನು ಖರೀದಿಸಲು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಲಾಗಿದೆ.

ಪೀಠೋಪಕರಣಗಳ ಖರೀದಿಯನ್ನು ಮಾಡುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಆದೇಶವನ್ನು ಶಿಕ್ಷಣ ಇಲಾಖೆಯ ಆಂತರಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ : ಶಿಇ 2975 ಐಎಫ್(ಬಿ) 2009 ದಿನಾಂಕ 30-11-2009ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಐ.ಎಫ್. ಮಾಗಿ)

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಅಧೀನ

ಪಿಆರ್ 33 ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ (ಯೋಜನೆ)

ಒಳಾಡಳಿತ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯದಲ್ಲಿ ವರದಕ್ಷಿಣೆ ಸಾವಿನ ಪ್ರಕರಣಗಳನ್ನು ಸಿ.ಐ.ಡಿ. ಇಲಾಖೆಯು ಇವರು ನಡೆಸುವ ಬದಲಾಗಿ ಸ್ಥಳೀಯ ಪೋಲೀಸರೇ ನಡೆಸುವ ಬಗ್ಗೆ.

ಓದಲಾಗಿದೆ : 1) ಪತ್ರ ಸಂಖ್ಯೆ: 2/ಸಿಬ್ಬಂದಿ-1/ಸಿಐಡಿ/07-08 ದಿನಾಂಕ 1-9-2009 ಪೋಲೀಸ್ ಮಹಾನಿರ್ದೇಶಕರು, ಸಿಐಡಿ, ತರಬೇತಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು ಇವರಿಂದ

2) ಪತ್ರ ಸಂ. ಅಪರಾಧ/142/ಮಿಸ./2009 ದಿನಾಂಕ 19-12-2009 ಮಹಾ ನಿರ್ದೇಶಕರು, ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರಿಂದ.

ಪ್ರಸ್ತಾವನೆ:

ಮೇಲಿನ (1)ನೇ ಉಲ್ಲೇಖದಲ್ಲಿ ಓದಲಾದ ಪತ್ರದಲ್ಲಿ ಪೋಲೀಸ್ ಮಹಾ ನಿರ್ದೇಶಕರು, ಸಿಐಡಿ, ತರಬೇತಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು ಇವರು ವರದಕ್ಷಿಣೆ ಸಾವಿನ ಪ್ರಕರಣಗಳ ತನಿಖೆಯಲ್ಲಿ ಹೆಚ್ಚಿನ ತನಿಖಾ ಕೌಶಲ್ಯತೆ ಬೇಡದೇ ಇರುವುದರಿಂದ ಹಾಗೂ ಸಿಐಡಿಗೆ ಈ ಪ್ರಕರಣಗಳು ಬರುವ ವೇಳೆಗೆ ಸ್ಥಳೀಯ

ತನಿಖಾಧಿಕಾರಿಗಳೇ ಕಾಲು ಭಾಗದಷ್ಟು ತನಿಖೆ ಮುಗಿಸಿರುವುದರಿಂದ ಇನ್ನು ಮುಂದೆ ರಾಜ್ಯದಲ್ಲಿ ಎಲ್ಲಾ ವರದಕ್ಷಿಣೆ ಸಾವಿನ ಪ್ರಕರಣಗಳನ್ನು ಸ್ಥಳೀಯ ಪೊಲೀಸರೇ ನಿಯಮಾನುಸಾರ ತನಿಖೆ ಮಾಡಬೇಕೆಂದು ಆದೇಶ ಹೊರಡಿಸುವಂತೆ ಕೋರಿರುತ್ತಾರೆ. ಮೇಲಿನ (2)ನೇ ಉಲ್ಲೇಖದಲ್ಲಿ ಓದಲಾದ ಪತ್ರದಲ್ಲಿ ಮಹಾ ನಿರ್ದೇಶಕರು, ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರು, ಸಹ ಸದರಿ ಪ್ರಸ್ತಾವನೆಯನ್ನು ಅನುಮೋದಿಸಿರುತ್ತಾರೆ.

ಈ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿರುತ್ತದೆ.

ಆದುದರಿಂದ ಈ ಆದೇಶ

ಸರ್ಕಾರಿ ಆದೇಶ ಸಂ. ಒಇ 130 ಸಿಐಡಿ 2009 ಬೆಂಗಳೂರು ದಿನಾಂಕ 31-12-2009

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಇನ್ನು ಮುಂದೆ ರಾಜ್ಯದಲ್ಲಿ ವರದಕ್ಷಿಣೆ ಸಾವಿನ ಪ್ರಕರಣಗಳನ್ನು ಸರ್ಕಾರ ಮತ್ತು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರು ಸಿಐಡಿಗೆ ವಹಿಸುವ ವಿಶೇಷ ಪ್ರಕರಣಗಳನ್ನು ಹೊರತು ಪಡಿಸಿ, ವರದಕ್ಷಿಣೆ ಸಾವಿನ ಪ್ರಕರಣಗಳ ತನಿಖೆಯನ್ನು ಸ್ಥಳೀಯ ಪೊಲೀಸರೇ ನಿಯಮಾನುಸಾರ ನಡೆಸುವಂತೆ ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ಪಿ. ಶಿವರಾಮ ಭಟ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಅಪರಾಧಗಳು)

ಪಿಆರ್ 34

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ವಿ.ವಿ. ಪುಣೇದ್, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ, ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈಬಿಡುವ ಬಗ್ಗೆ ಆದೇಶ.

ಓದಲಾಗಿದೆ : 1) ದಿನಾಂಕ : 09-03-07ರ ನೋಟೀಸು ಸಂಖ್ಯೆ : ಸಿಆಸುಇ 023 ಎಸ್ಇಎನ್ 07.
2) ಶ್ರೀ ವಿ.ವಿ. ಪುಣೇದ್, ಕೆಎಎಸ್. (ಕಿರಿಯ ಶ್ರೇಣಿ) ಇವರ ದಿನಾಂಕ : 20-03-07 ರ ಲಿಖಿತ ರಕ್ಷಣಾತ್ಮಕ ಹೇಳಿಕೆ.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಕಾರಣ ಕೇಳುವ ನೋಟಿಸಿನಲ್ಲಿ ಶ್ರೀ ವಿ.ವಿ. ಪುಣೇದ್, ಕೆಎಎಸ್ (ಕಿರಿಯ ಶ್ರೇಣಿ) ಅಧಿಕಾರಿರವರ ಸೇವೆಯನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಹಿಂದಕ್ಕೆ ಪಡೆದು ದಿನಾಂಕ : 09-10-06ರ ಅಧಿಸೂಚನೆ ಸಂಖ್ಯೆ : ಸಿಆಸುಇ 183 ಆಸೇವ 06ರಲ್ಲಿ ಉಪ ವಿಭಾಗಾಧಿಕಾರಿ, ಸೇಡಂ ಉಪ ವಿಭಾಗ, ಸೇಡಂ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಲಾಗಿದ್ದರೂ ಇವರು ಸದರಿ ಹುದ್ದೆಯ ಕರ್ತವ್ಯಕ್ಕೆ ಹಾಜರಾಗದೇ ಅನಧಿಕೃತ ಗೈರು ಹಾಜರಾಗಿ ಸರ್ಕಾರದ ಆದೇಶ / ನಿರ್ದೇಶನವನ್ನು ಪಾಲಿಸದಿರುವ ಮೂಲಕ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ತೀವ್ರ ದುರ್ನಡತೆ ಎಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ ನಿಯಮ 3 ಅನ್ನು ಉಲ್ಲಂಘಿಸಿರುವ ಕಾರಣ, ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 11 ಮತ್ತು 11-ಎ ರನ್ವಯ ದೋಷಾರೋಪಣ ಪಟ್ಟಿಯನ್ನು ಜಾರಿಗೊಳಿಸಿ ಶಿಸ್ತು ಕ್ರಮವನ್ನು ಪ್ರಾರಂಭಿಸಲಾಯಿತು.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಪುಣೇದ್ ರವರು, ದಿನಾಂಕ : 09-03-07 ರ ಕಾರಣ ಕೇಳುವ ನೋಟೀಸಿಗೆ ಲಿಖಿತ ರಕ್ಷಣಾತ್ಮಕ ಹೇಳಿಕೆ ಸಲ್ಲಿಸಿ ಶಿಸ್ತು ಕ್ರಮವನ್ನು ಕೈಬಿಡುವಂತೆ ಮನವಿ ಮಾಡಿದ್ದು, ಸದರಿ ಲಿಖಿತ ರಕ್ಷಣಾತ್ಮಕ ಹೇಳಿಕೆಯಲ್ಲಿ ತಾನು ಡಿಎಮ್. ಹೆಚ್.ಟಿ.ಎನ್. ಮತ್ತು Veinous insufficiency of both legs with varicose ulcer ಖಾಯಿಲೆಗಳಿಂದ ಬಳಲುತ್ತಿದ್ದು ಈ ಖಾಯಿಲೆಗಳಿಗೆ ಬೆಂಗಳೂರಿನಲ್ಲಿ ಮಾತ್ರ ಚಿಕಿತ್ಸೆ ಲಭ್ಯವಿರುವ ಕಾರಣ, ಸ್ಥಳ ನಿಯುಕ್ತಿಗೊಳಿಸಲಾದ ಉಪ ವಿಭಾಗಾಧಿಕಾರಿ ಸೇಡಂ ಉಪ ವಿಭಾಗ, ಸೇಡಂ ಹುದ್ದೆಯ ಕರ್ತವ್ಯಕ್ಕೆ ಹಾಜರಾಗಲು ವೈದ್ಯಕೀಯ ಕಾರಣಗಳ ಮೇಲೆ ಸಾಧ್ಯವಾಗಲಿಲ್ಲವೆಂದು ತಿಳಿಸುತ್ತಾ ಅನಧಿಕೃತ ಗೈರು ಹಾಜರಿ ಅವಧಿಯನ್ನು ವೈದ್ಯಕೀಯ ಕಾರಣಗಳ ರಜೆಯನ್ನಾಗಿ ಮಂಜೂರು ಮಾಡುವಂತೆ ಮನವಿ ಮಾಡಿರುತ್ತಾರೆ. ಇವರ ರಕ್ಷಣಾತ್ಮಕ ಹೇಳಿಕೆಯಲ್ಲಿನ ಅಂಶಗಳ ಬಗ್ಗೆ ವೈದ್ಯಕೀಯ ಮಂಡಳಿಯ ಅಭಿಪ್ರಾಯ ಪಡೆದ ನಂತರ, ಸರ್ಕಾರವು ಶ್ರೀ ಪುಣೇದ್ ರವರು ಸಲ್ಲಿಸಿದ ರಕ್ಷಣಾತ್ಮಕ ಹೇಳಿಕೆಯನ್ನು ಅಂಗೀಕರಿಸುತ್ತಾ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 084 ಕೆಇವಿ 07, ಬೆಂಗಳೂರು, ದಿನಾಂಕ 21ನೇ ಡಿಸೆಂಬರ್ 2009.

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ ಸರ್ಕಾರವು ಶ್ರೀ ಪಿ.ಪಿ. ಪುಣೇದ್, ಕೆಎಎಸ್. (ಕಿರಿಯ ಶ್ರೇಣಿ) ಆಯುಕ್ತರು. ನಗರಾಭಿವೃದ್ಧಿ ಪ್ರಾಧಿಕಾರ, ಕೊಪ್ಪಳ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ ನಿಯಮ 11 ಮತ್ತು 11-ಎ ರನ್ವಯ ದೋಷಾರೋಪಣ ಪಟ್ಟಿಯೊಂದಿಗೆ ದಿನಾಂಕ : 09-03-07 ರಂದು ಜಾರಿಗೊಳಿಸಿದ ನೋಟೀಸಿಗೆ ಇವರು ದಿನಾಂಕ 20-03-07 ರಂದು ಸಲ್ಲಿಸಿದ ಲಿಖಿತ ರಕ್ಷಣಾತ್ಮಕ ಹೇಳಿಕೆಯನ್ನು ಅಂಗೀಕರಿಸಿ ಇವರು ಇನ್ನು ಮುಂದೆ ಸರ್ಕಾರಿ ಕೆಲಸದ ಕಾರ್ಯನಿರ್ವಹಣೆಯಲ್ಲಿ ಹೆಚ್ಚಿನ ಜಾಗರೂಕತೆಯಿಂದ ಕರ್ತವ್ಯ ನಿರ್ವಹಿಸುವಂತೆ ಎಚ್ಚರಿಕೆ ನೀಡುತ್ತಾ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈಬಿಡಲು ನಿರ್ಣಯಿಸಿದೆ.

ಇವರ ಅನಧಿಕೃತ ಗೈರು ಹಾಜರಿ ಅವಧಿಯನ್ನು ಈ ಕೆಳಕಂಡಂತೆ ಹೊಂದಾಣಿಕೆ ಮಾಡಿ ಸಕ್ರಮಗೊಳಿಸಿದೆ.

1. ದಿನಾಂಕ : 09-10-06 ರಿಂದ 24-11-06 ರವರೆಗಿನ 47 ದಿನಗಳು-ವೈದ್ಯಕೀಯ ಕಾರಣದ ಮೇಲೆ ಗಳಿಕೆ ರಜೆ.
2. ದಿನಾಂಕ : 25-11-06 ರಿಂದ 24-12-06 ರವರೆಗಿನ 30 ದಿನಗಳು-ವೈದ್ಯಕೀಯ ಕಾರಣದ ಮೇಲೆ ಅರ್ಧ ವೇತನ ರಜೆ.
3. ದಿನಾಂಕ 25-12-06 ರಿಂದ 31-07-07 ರವರೆಗಿನ ಅವಧಿಯು-ವೈದ್ಯಕೀಯ ಕಾರಣದ ಮೇಲೆ Extra-ordinary Leave.

ಈ ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ ಇವರು ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಹೆಚ್.ಆರ್. ನಾಗೇಂದ್ರ)

ಸರ್ಕಾರದ ಅಧೀನ ಕಾರ್ಯದರ್ಶಿ

ಪಿಆರ್ 35 ಸಿಆಸುಇ (ಸೇವೆಗಳು-2)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎಚ್.ಆರ್. ಪಾಟೀಲ್, ಕೆ.ಎ.ಎಸ್. ಮತ್ತು ಶ್ರೀ ಎಸ್.ಬಿ. ಹೊನ್ನೂರ್ ಹಿಂದಿನ ಸಹಾಯಕ ನಿರ್ದೇಶಕರು ನಗರ ಯೋಜನಾ ಇಲಾಖೆ ಇವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ – ಆದೇಶ ತಿದ್ದುಪಡಿ ಮಾಡುವ ಬಗ್ಗೆ.

ಓದಲಾಗಿದೆ : ಸರ್ಕಾರಿ ಆದೇಶ ಸಂ : ಸಿಆಸುಇ 106 ಎಸ್ಇಎನ್ 91 ದಿನಾಂಕ: 13-05-1998.

ಪ್ರಸ್ತಾವನೆ :

ಶ್ರೀ ಎಚ್.ಆರ್. ಪಾಟೀಲ್, ಕೆ.ಎ.ಎಸ್. ಅಧಿಕಾರಿ ಇವರು ಆಯುಕ್ತರಾಗಿ ಹಾಗೂ ಶ್ರೀ ಎಸ್.ಬಿ. ಹೊನ್ನೂರ್, ಇವರು ಸಹಾಯಕ ನಿರ್ದೇಶಕರಾಗಿ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ರಾಯಚೂರು ಮುನಿಸಿಪಲ್ ಪ್ರದೇಶದಲ್ಲಿನ ವಲಯ ನಿರ್ಬಂಧ ನಿಯಮಗಳನ್ನು 1961ರ ನಗರ ಮತ್ತು ಗ್ರಾಮ ಯೋಜನೆ ಕಾಯಿದೆಯ ನಿಯಮಗಳನ್ನು ಉಲ್ಲಂಘಿಸಿ ಅಕ್ರಮವಾಗಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಿದ ಮತ್ತು ನಂಬಿಕೆ ದ್ರೋಹದ ಆರೋಪಗಳ ಮೇಲೆ ಸದರಿ ಅಧಿಕಾರಿಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ನಡೆದಿದ್ದು ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ಮೇಲೆ ಓದಲಾದ ಕ್ರಮ ಸಂ. (1)ರ ಆದೇಶದಲ್ಲಿ ಶ್ರೀ ಎಚ್.ಆರ್. ಪಾಟೀಲ್ ಕೆ.ಎ.ಎಸ್. ಅಧಿಕಾರಿ ಇವರಿಗೆ 1957ರ ಸಿ.ಸಿ.ಎ. ನಿಯಮಾವಳಿ 1957ರ ನಿಯಮ 8 (IV-A) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಇವರ ವೇತನವನ್ನು ಒಂದು ಹಂತ ಕೆಳಗೆ ಇಳಿಸುವ ದಂಡನೆಯನ್ನು ಹಾಗೂ ಶ್ರೀ ಎಸ್.ಬಿ. ಹೊನ್ನೂರ್, ಅಂದಿನ ಸಹಾಯಕ ನಿರ್ದೇಶಕರು, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ ಇವರಿಗೆ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 8(iii) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಇವರ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಬೀರುವಂತೆ ತಡೆ ಹಿಡಿಯುವ ದಂಡನೆಯನ್ನು ವಿಧಿಸಲಾಗಿತ್ತು. ಶಿಸ್ತು ಪ್ರಾಧಿಕಾರವು ವಿಧಿಸಿದ ದಂಡನೆಯ ಆದೇಶದ ವಿರುದ್ಧ ಶ್ರೀ ಎಸ್.ಬಿ. ಹೊನ್ನೂರ್‌ರವರು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂ : 6452/1998 ಅನ್ನು ದಾಖಲಿಸಿ ತಮ್ಮ ವಿರುದ್ಧದ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ವಿಧಿಸಲಾಗಿದ್ದ ದಂಡನೆಯನ್ನು ರದ್ದುಗೊಳಿಸುವಂತೆ ಕೋರಿದ್ದರು.

ಈ ಸಂಬಂಧವಾಗಿ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ದಿನಾಂಕ 26-11-08 ರಂದು ಈ ಕೆಳಕಂಡಂತೆ ಆದೇಶವನ್ನು ನೀಡಿರುತ್ತದೆ.

In that view of the matter, we find that the order of the inquiring authority and the order of the Disciplinary Authority hodling that the charge has been proved is not sustainable. For the aforesaid reasons, the application is allowed and the order of the Disciplinary Authority bearing No. ಸಿಆಸುಇ 106 ಎಸ್‌ಇಎನ್ 1991 Dt. 21-1-1993 and that of the Appellate Authority bearing No. ಸಿಆಸುಇ 106 ಎಸ್‌ಇಎನ್ 91 dt. 13-5-1998, so far as they relate to this applicant Sri S.B. Honnur are hereby quashed. The with held increments shall be released forthwith

ಆದುದರಿಂದ ಶ್ರೀ ಎಸ್.ಬಿ. ಹೊನ್ನೂರ್‌ರವರು ಕೆ.ಎ.ಟಿ.ಯಲ್ಲಿ ದಾಖಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಇವರಿಗೆ ವಿಧಿಸಿದ ದಂಡನೆಯ ಆದೇಶವನ್ನು ರದ್ದುಗೊಳಿಸಿ ತಡೆಹಿಡಿದಿರುವ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆ ಮಾಡಲು ನಿರ್ಣಯಿಸಲಾಗಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 128 ಎಸ್‌ಇಎನ್ 1998 (ಸಿಆಸುಇ) 287 ಕೆಇಬಿ 2007), ಬೆಂಗಳೂರು ದಿನಾಂಕ 17ನೇ ಡಿಸೆಂಬರ್ 2009.

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ ಶ್ರೀ ಹೊನ್ನೂರ್, ಅಂದಿನ ಸಹಾಯಕ ನಿರ್ದೇಶಕರು ನಗರ ಯೋಜನಾ ಇಲಾಖೆ ಹಾಲಿ ನಗರ ಯೋಜನಾ ಹೆಚ್ಚುವರಿ ನಿರ್ದೇಶಕರು, ಬಿ.ಎಂ.ಆರ್.ಡಿ.ಎ. ಬೆಂಗಳೂರು ಇವರ ವಿರುದ್ಧದ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ದಿನಾಂಕ 13-05-1998ರ ಸರ್ಕಾರಿ ಆದೇಶ ಸಂ : ಸಿಆಸುಇ 106 ಎಸ್.ಇ.ಎನ್. 91 ರಲ್ಲಿ ಅವರ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಬೀರುವಂತೆ ತಡೆ ಹಿಡಿದು ವಿಧಿಸಲಾಗಿದ್ದ ದಂಡನೆಯನ್ನು ರದ್ದುಗೊಳಿಸಲಾಗಿದೆ. ಸದರಿಯವರ ವಿರುದ್ಧ ಈ ಪ್ರಕರಣದ ವಿಚಾರಣೆ ನಡೆಯದಿದ್ದಲ್ಲಿ ಅವರು ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಹೆಚ್.ಆರ್. ನಾಗೇಂದ್ರ)

ಸರ್ಕಾರದ ಅಧೀನ ಕಾರ್ಯದರ್ಶಿ

ಪಿಆರ್ 36 ಸಿಆಸುಇ (ಸೇವೆಗಳು-2)

ಒಳಾಡಳಿತ ಸಚಿವಾಲಯ

ವಿಷಯ: ಶ್ರೀಮತಿ ಎಂ. ಸಾವಿತ್ರಿ, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಘನ ಪಿ.ಸಿ.ಜೆ.ಎಂ. ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ, ಶಿವಮೊಗ್ಗ ಇವರ ಮೇಲಿನ ಟ್ರ್ಯಾಪ್ ಪ್ರಕರಣದಲ್ಲಿ ಅಭಿಯೋಜನಾ ಮಂಜೂರಾತಿ ಕುರಿತು.

ಉಲ್ಲೇಖ: 1) ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ(ಜಿ)ಸಿಟಿಎಲ್-23/ಸಿಆರ್7/2009 ಶಿವಮೊಗ್ಗ ದಿನಾಂಕ : 18-11-2009.

2) ತನಿಖಾಧಿಕಾರಿಯ ವರದಿ 05-10-2009.

3) ತನಿಖಾ ದಾಖಲೆಗಳಾದ ಪಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಸಾಯನಿಕ ಪರಿವೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.

ಪ್ರಸ್ತಾವನೆ :

ಶ್ರೀಮತಿ ಎಂ. ಸಾವಿತ್ರಿ, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಘನ ಪಿ.ಸಿ.ಜೆ.ಎಂ ಮತ್ತು ಎ.ಸಿ.ಜೆ.ಎಂ ನ್ಯಾಯಾಲಯ, ಶಿವಮೊಗ್ಗ ಇವರ ವಿರುದ್ಧ ಮೊಕದ್ದಮೆ ಸಂಖ್ಯೆ : 07/09 ಕಲಂ 7, 13(1)(ಡಿ) ರೆಡ್‌ವಿತ್ (13)(2)ರ ಲಂಚ ನಿರೋಧಕ ಕಾಯ್ದೆ 1988ರ ಅಡಿಯಲ್ಲಿ ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಶಿವಮೊಗ್ಗ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯ ಅಂತಿಮ ತನಿಖಾ ವರದಿಯ ನಕಲು ಮತ್ತು ತನಿಖಾ ದಾಖಲಾತಿಗಳನ್ನು ಉಲ್ಲೇಖ (2) ಮತ್ತು (3)ರೊಡನೆ ಅಪರ ಪೊಲೀಸ್ ಮಹಾನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ದಿನಾಂಕ 18-11-2009 (ಉಲ್ಲೇಖ 1) ರೊಡನೆ ಕಳುಹಿಸುತ್ತಾ ಅಪಾದಿತೆಯನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 19(1)(ಬಿ) ಕಲಂ ಅಡಿಯಲ್ಲಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು, ಅಪರ ಪೊಲೀಸ್ ಮಹಾನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಮ್ಮ ಉಲ್ಲೇಖ(1)ರ ಪತ್ರ ದಿನಾಂಕ : 18-11-2009 ರೊಂದಿಗೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

(1) ಪ್ರಥಮ ವರ್ತಮಾನ ವರದಿ ಮತ್ತು ಪಿರ್ಯಾದಿಯ ದೂರಿನ ನಕಲು, ಪಂಚಸಾಕ್ಷಿಗಳನ್ನು ಬರಮಾಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಿದ ಕೋರಿಕೆ ಪತ್ರದ ನಕಲುಗಳು, ವಹಿಸುವಿಕೆ ಮತ್ತು ಜಪ್ತಿ ಪಂಚನಾಮೆಗಳ ನಕಲುಗಳು, ಟ್ರ್ಯಾಪ್ ಯಶಸ್ವಿಯಾದ ಬಗ್ಗೆ ನ್ಯಾಯಾಲಯಕ್ಕೆ ಸಲ್ಲಿಸಿದ ವರದಿಯ ನಕಲು, ಸ್ವತ್ತುಪಟ್ಟಿ ನಕಲು, ತನಿಖಾ ಕಾಲದಲ್ಲಿ ತೆಗೆದಿರುವ ಫೋಟೋಗಳ ಛಾಯಾ ಪ್ರತಿಗಳು

(2) ಸಾಕ್ಷಿದಾರರುಗಳ ಹೇಳಿಕೆಗಳ ಮತ್ತು ಮುಂದುವರಿದ ಹೇಳಿಕೆಗಳ ನಕಲು ಪ್ರತಿಗಳು

(3) ಅ) ಆಪಾದಿತೆ ಅಧಿಕಾರಿಯ ಸೇವಾ ವಿವರಗಳ ಮಾಹಿತಿಯಿರುವ ಪ್ರತಿ

ಆ) ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣೆ ಗುನ್ನೆ ನಂ. 278/09ನೇ ಪ್ರಕರಣದ ದೃಢೀಕೃತ ದಾಖಲೆಗಳ ಪ್ರತಿಗಳು

(4) ಅ) ರಸಾಯನಿಕ ಪರಿವೀಕ್ಷಕರ ವರದಿಯ ನಕಲು

ಆ) ಕೃತ್ಯ ನಡೆದ ಸ್ಥಳದ ನಕಾಶೆಯ ಪ್ರತಿ

(5) ಆಪಾದಿತೆ ಅಧಿಕಾರಿಯು ನೀಡಿರುವ ಸ್ವ ರಕ್ಷಣಾ ಹೇಳಿಕೆಯ ನಕಲು

(6) ಪ್ರಕರಣದ ಪಿರ್ಯಾದುದಾರರು ಕೋರ್ಟ್ ಸಿಆರ್ ನಂ.244/09 ನೇದ್ದರಲ್ಲಿ ಅಪಾದಿತರಾಗಿರುವ ವಿಜಯಕುಮಾರ್ ಇವರ ಪರವಾಗಿ ಘನ ನ್ಯಾಯಾಲಯಕ್ಕೆ ಸಲ್ಲಿಸಿರುವ ವಕಾಲತ್ತು ಅರ್ಜಿಯ ದೃಢೀಕೃತ ಪ್ರತಿ.

ಸಾಕ್ಷಿಗಳ ಹೇಳಿಕೆಗಳು :

(1) ಶ್ರೀ ಎಂ. ಲೋಕೇಶ್ ಈಸೂರು ತಂದೆ ಮುನಿಯಪ್ಪ, 46 ವರ್ಷ, ನ್ಯಾಯಾವಾದಿಗಳು, ವಾಸ ಮಾರುತಿ ನಿಲಯ, 2ನೇ ತಿರುವು, ಚೆನ್ನಪ್ಪ ಲೇಔಟ್, ಶಿವಮೊಗ್ಗ.

(2) ಶ್ರೀ ಪೂರ್ಣಚಂದ್ರ ತಂದೆ ಲೇಟ್ ಟಿ.ಆರ್. ಚಂದ್ರಪ್ಪ, 28 ವರ್ಷ, ದ್ವಿ.ದ.ಸ. ಉಪ ನಿರ್ದೇಶಕರ ಕಛೇರಿ, ತೋಟಗಾರಿಕೆ ಇಲಾಖೆ, ಶಿವಮೊಗ್ಗ ವಾಸ ಶಿವದರ್ಶನ ನಿಲಯ, ಮರವಂಜಿ ಗ್ರಾಮ, ಮೇದಗೊಂಡನ ಹಳ್ಳಿ ಪೋಸ್ಟ್, ಚೆನ್ನಗಿರಿ ತಾ: ದಾವಣಗೆರೆ ಜಿಲ್ಲೆ.

(3) ಶ್ರೀ ಗಿರೀಶ್ ತಂದೆ ಗಂಗಯ್ಯ, ವಯಸ್ಸು, 30 ವರ್ಷ, ದ್ವಿ.ದ.ಸ. ತಾಲ್ಲೂಕು ಕಛೇರಿ, ಶಿವಮೊಗ್ಗ, ವಾಸ ನಂ. 63, 3ನೇ ಮೈನ್ ಕ್ರಾಸ್, ಮಾರಮ್ಮ ದೇವಸ್ಥಾನದ ರಸ್ತೆ, ಮಂಜುನಾಥ ನಗರ, ನಾಗಸಮುದ್ರ ಪೋಸ್ಟ್, ತುಮಕೂರು ಮುಖ್ಯ ರಸ್ತೆ, ಬೆಂಗಳೂರು.

(4) ಶ್ರೀ ಎಸ್. ಹಾಲಪ್ಪ, ದ್ವಿತೀಯ ದರ್ಜೆ ಸಹಾಯಕರು, ಸೀನಿಯರ್ ಎ.ಪಿ.ಪಿ.ಯವರ ಕಛೇರಿ, ಶಿವಮೊಗ್ಗ.

(5) ಶ್ರೀ ಟಿ. ಮುಕುಂದ ರಾಜ್, ಸಹಾಯಕ ಇಂಜಿನಿಯರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ನಂ. 1 ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ.

(6) ಶ್ರೀಮತಿ ಎಂ.ಆರ್. ನಾಗರತ್ನ, ಕ್ಲರ್ಕ್-ಕಂ-ಟೈಪಿಸ್ಟ್ ಪೊಲೀಸ್ ಉಪಾಧೀಕ್ಷಕರ ಕಛೇರಿ, ಕರ್ನಾಟಕ ಲೋಕಾಯುಕ್ತ, ಶಿವಮೊಗ್ಗ.

(7) ಶ್ರೀ ಸಣ್ಣಪ್ಪ ಎನ್. ಕೋಣನತಲೆ, ಮುಖ್ಯ ಪೇದೆ, ಲೋಕಾಯುಕ್ತ ಪೊಲೀಸ್ ಠಾಣೆ, ಶಿವಮೊಗ್ಗ.

(8) ಶ್ರೀ ಜಿ.ಪಿ. ಬಸವರಾಜಪ್ಪ, ಪೊಲೀಸ್ ಹೆಡ್ ಕಾನ್ಸ್‌ಟೇಬಲ್, ಲೋಕಾಯುಕ್ತ ಪೊಲೀಸ್ ಠಾಣೆ, ಶಿವಮೊಗ್ಗ.

(9) ಶ್ರೀ ವಿ. ಶ್ರೀನಿವಾಸ, ಸಿ.ಪಿ.ಸಿ. ಲೋಕಾಯುಕ್ತ ಪೊಲೀಸ್ ಠಾಣೆ, ಶಿವಮೊಗ್ಗ.

(10) ಶ್ರೀ ರಮೇಶ್ ಎಸ್. ಪೊಲೀಸ್ ಕಾನ್ಸ್‌ಟೇಬಲ್, ಲೋಕಾಯುಕ್ತ ಪೊಲೀಸ್ ಠಾಣೆ, ಶಿವಮೊಗ್ಗ.

(11) ಶ್ರೀ ಎ. ಮಂಜುನಾಥ, ಪೊಲೀಸ್ ಕಾನ್ಸ್‌ಟೇಬಲ್ (ಕೆಎ-01-ಜಿ-4099ನೇ ವಾಹನದ ಚಾಲಕ) ಪೊಲೀಸ್ ಇನ್ಸ್‌ಪೆಕ್ಟರ್‌ರವರ ಕಛೇರಿ, ಕರ್ನಾಟಕ ಲೋಕಾಯುಕ್ತ, ಶಿವಮೊಗ್ಗ.

ಲಂಚ ಕೇಳಲು ಆಧಾರವಾದ ದಾಖಲೆಗಳು :

(1) ಪಿರ್ಯಾದುದಾರರ ದೂರಿನ ಪ್ರತಿ ದಿನಾಂಕ : 04-07-2009.

(2) ಶಿವಮೊಗ್ಗ ಗ್ರಾಮಾತರ ಪೊಲೀಸ್ ಠಾಣೆ ಗುನ್ನೆ ನಂ. 278/09ನೇ ಪ್ರಕರಣದ ದೃಢೀಕೃತ ದಾಖಲೆಗಳ ಪ್ರತಿಗಳು

ಆಪಾದಿತರ ಸಮಜಾಯಿಸಿ ಹೇಳಿಕೆಗಳು :

ತನಿಖಾಧಿಕಾರಿಗಳಾದ ಶ್ರೀ ಎಂ.ಎಸ್. ಕರಿಬಸವನಗೌಡ, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಶಿವಮೊಗ್ಗ ಇವರು ಶ್ರೀಮತಿ ಎಂ. ಸಾವಿತ್ರಿ, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಪಿ.ಸಿ.ಜೆ.ಎಂ ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ, ಶಿವಮೊಗ್ಗ ಇವರ ವಿರುದ್ಧ ದಂಡಾರ್ಹ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಶಿವಮೊಗ್ಗ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ : 07/2009ರಲ್ಲಿ ಲಂಚ ನಿರೋಧಕ ಕಾಯ್ದೆ 1988ರ ಕಲಂ 7ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ.

ಆಪಾದಿತರಾದ ಶ್ರೀಮತಿ ಎಂ. ಸಾವಿತ್ರಿ, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಪಿ.ಸಿ.ಜೆ.ಎಂ ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ, ಶಿವಮೊಗ್ಗ ಇವರ ವಿರುದ್ಧ ಪಿರ್ಯಾದುದಾರರಾದ ಶ್ರೀ ಎಂ. ಲೋಕೇಶ ಈಸೂರು, ನ್ಯಾಯವಾದಿಗಳು, ವಾಸ 2ನೇ ತಿರುವು, ಮಾರುತಿ ನಿಲಯ, ಚೆನ್ನಪ್ಪ ಲೇಔಟ್, ಶಿವಮೊಗ್ಗ ಇವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರಿನ ಅನ್ವಯ ಶಿವಮೊಗ್ಗದ 1ನೇ ಹೆಚ್ಚುವರಿ ಹಿರಿಯ ನ್ಯಾಯಾಲಯದ ಕೋರ್ಟ್ ಕ್ರೈಂ ನಂ. 244/09 ಕಲಂ 498(ಎ), 313 ರೆಡ್‌ವಿತ್ 34 ಐಪಿಸಿ ಪ್ರಕರಣವಲ್ಲಿ, ಗ್ರಾಮಾಂತರ ಪೊಲೀಸರು ಆರೋಪಿ ವಿಜಯಕುಮಾರ್‌ರವರನ್ನು ದಿನಾಂಕ : 18-06-09 ರಂದು ದಸ್ತಗಿರಿ ಮಾಡಿದ್ದು, ಅವರಿಗೆ ದಿನಾಂಕ : 02-07-2009ರ ವರೆಗೆ ನ್ಯಾಯಾಂಗ ಬಂಧನವಾಗಿರುತ್ತದೆ. ದಿನಾಂಕ : 02-07-2009 ರಂದು ಪಿರ್ಯಾದುದಾರರು ಘನ ನ್ಯಾಯಾಲಯಕ್ಕೆ ಆಪಾದಿತರ ಪರವಾಗಿ ವಕಾಲತ್ತು ಮತ್ತು ಜಾಮೀನು ಅರ್ಜಿಯನ್ನು ಹಾಕಿರುತ್ತಾರೆ. ನ್ಯಾಯಾಲಯವು ಅಪಾದಿತ ವಿಜಯಕುಮಾರ್‌ರವರಿಗೆ ದಿನಾಂಕ : 15-07-2009ರ ವರೆಗೆ ನ್ಯಾಯಾಂಗ ಬಂಧನವನ್ನು ವಿಸ್ತರಿಸುತ್ತದೆ. ಶ್ರೀಮತಿ ಎಂ. ಸಾವಿತ್ರಿ, ಎ.ಪಿ.ಪಿ.ಯವರು ಘನ ನ್ಯಾಯಾಲಯಕ್ಕೆ ಸದರಿ ಪ್ರಕರಣದಲ್ಲಿ ಜಾಮೀನು ತಕರಾರು ಅರ್ಜಿಯನ್ನು ಸಲ್ಲಿಸುವುದು ಬಾಕಿ ಇದ್ದು, ಈ ಸಂಬಂಧ ಅವರನ್ನು ಪಿರ್ಯಾದುದಾರರು ದಿನಾಂಕ : 13-07-2009 ರಂದು ನ್ಯಾಯಾಲದಲ್ಲಿರುವ ಅವರ ಕಛೇರಿಯಲ್ಲಿ ಭೇಟಿ ಮಾಡಿ ತಕರಾರು ಅರ್ಜಿ ಹಾಕಲು ಕೇಳಿಕೊಂಡಾಗ ಅವರು 500/- ರೂ. ಲಂಚ ಕೇಳಿರುತ್ತಾರೆಂದು ಅದಕ್ಕೆ ಪಿರ್ಯಾದುದಾರರು ಕೊಡುವುದಿಲ್ಲ ಅದು ಸೆಷನ್ ಟ್ರಯಲ್ ಕೇಸ್ ಕೇವಲ ಫಾರ್ಮಲ್ ತಕರಾರು ಎಂದಿದ್ದಕ್ಕೆ ಅಪಾದಿತರು 500/- ರೂಗಳನ್ನು ಕೂಡಲೇ ಬೇಕು ಇಲ್ಲಾವಾದರೆ 15-07-2009ರ ವರೆಗೆ ತಕರಾರು ಹಾಕುವುದಿಲ್ಲ ಎಂದಿರುತ್ತಾರೆಂದು. ಕಾರಣ ಜಾಮೀನು ಅರ್ಜಿಗೆ ತಕರಾರು ಹಾಕಲು ಲಂಚ ಕೇಳುತ್ತಿರುವ ಸೀನಿಯರ್ ಎ.ಪಿ.ಪಿ. ಇವರ ವಿರುದ್ಧ ಆಪಾದನೆ ಮಾಡಿ ದೂರು ನೀಡಿರುತ್ತಾರೆ. ಸದರಿ ದೂರನ್ನು ದಿನಾಂಕ : 04-07-2009 ರಂದು ಶ್ರೀಮತಿ ಎಂ. ಸಾವಿತ್ರಿ, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಪಿ.ಸಿ.ಜೆ.ಎಂ. ಮತ್ತು ಎ.ಸಿ.ಜೆ.ಎಂ ನ್ಯಾಯಾಲಯ, ಶಿವಮೊಗ್ಗ ಇವರ ವಿರುದ್ಧ ದೂರು ದಾಖಲಿಸಿಕೊಂಡ ಬಳಿಕ ತನಿಖಾಧಿಕಾರಿಗಳು ಬಲೆ ಬೀಸುವ ಮೊದಲಿನ ಎಲ್ಲಾ ಔಚಿತ್ಯಪೂರ್ಣ ಕಾರ್ಯಕ್ರಮಗಳನ್ನು ನೆರವೇರಿಸಿದ ನಂತರ ದಿನಾಂಕ 04-07-2009 ರಂದು ಶಿವಮೊಗ್ಗದ ಸಿ.ಜೆ.ಎಂ. ನ್ಯಾಯಾಲಯದಲ್ಲಿರುವ ಕಛೇರಿಯಲ್ಲಿ ಬೀಸಿದ ಟ್ರ್ಯಾಪ್ ಯಶಸ್ವಿಯಾಗಿ, ಶ್ರೀಮತಿ ಎಂ. ಸಾವಿತ್ರಿ, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಪಿ.ಸಿ.ಜೆ..ಎಂ ಮತ್ತು ಎ.ಸಿ.ಜೆ.ಎಂ ನ್ಯಾಯಾಲಯ, ಶಿವಮೊಗ್ಗ ಇವರು ಅಕ್ರಮ ಸಂಭಾವನೆಯಾದ ರೂ. 500/-ಗಳನ್ನು ಪಿರ್ಯಾದುದಾರರಿಂದ ಹಣವನ್ನು ತಮ್ಮ ಬಲಗೈಯಿಂದ ಪಡೆದುಕೊಂಡು ತಮ್ಮ ವ್ಯಾನಿಟಿ ಬ್ಯಾಗ್‌ನಲ್ಲಿ ಹಾಕಿಕೊಂಡಿರುತ್ತಾರೆ. ನಂತರ ಸದರಿ ನೌಕರರ ಬಲಗೈ ಮತ್ತು ಎಡಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಮಾರ್ಜನೆ ಮಾಡಿ, ಫಿನಾಫ್ತಲೀನ್ ಪರೀಕ್ಷೆಗೆ ಒಳಪಡಿಸಿದಾಗ ಅದು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು, ರಾಸಾಯನಿಕ ತಜ್ಞರ ಪರೀಕ್ಷಣಾ ವರದಿಯಿಂದಲೂ ಧೃಡಪಟ್ಟಿರುತ್ತದೆ. ಆಪಾದಿತರ ಬ್ಯಾಗನ್ನು ಪರಿಶೀಲಿಸಿದಾಗ, ಬ್ಯಾಗಿನ ಹಿಂಭಾಗದ ಒಳಭಾಗದ ಸೈಡ್ ಪಾಕೆಟ್‌ನ ಜಿಪ್ಪನ್ನು ತೆರೆದು ನೋಡಲಾಗಿ ಅದರಲ್ಲಿ ರೂ. 500/- ಮೌಲ್ಯದ ಒಂದು ನೋಟು ಇದ್ದು, ವಹಿಸುವಿಕೆ ಪಂಚನಾಮೆಗೆ ತಾಳೆ ಮಾಡಿದಾಗ ಈ ನೋಟು ತಾಳೆ ಹೊಂದಿರುತ್ತದೆ. ಆರೋಪಿತ ಅಧಿಕಾರಿ ಅಕ್ರಮ ಸಂಭಾವನೆ ಪಡೆದ ಸಂದರ್ಭದಲ್ಲಿ ಪಿರ್ಯಾದಿ ಹಾಗೂ ಆಪಾದಿತ ಸರ್ಕಾರಿ ನೌಕರಳ ನಡುವಿನ ವ್ಯವಹಾರವನ್ನು ನೆರಳು ಸಾಕ್ಷಿಯು ಗಮನಿಸಿ, ಲಂಚದ ಹಣ ಕೇಳಿ ಪಡೆದಿರುವುದನ್ನು ಸಾಕ್ಷಿ ಮಾಡಿರುತ್ತಾರೆ, ಅಕ್ರಮ ಸಂಭಾವನೆಯಾದ ರೂ. 500/- ಗಳನ್ನು ಶ್ರೀಮತಿ ಎಂ. ಸಾವಿತ್ರಿ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಪಿ.ಸಿ.ಜೆ.ಎಂ. ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ, ಶಿವಮೊಗ್ಗರವರ ಕಛೇರಿಯಲ್ಲಿ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧ ಕಾಯ್ದೆ 1988ರ ಕಲಂ 7, 13(1) (ಡಿ)ರ ಸಹ ಕಲಂ 13(2)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ ಇವರನ್ನು ಲಂಚ ನಿರೋಧ ಕಾಯ್ದೆ 1988ರ ಅನ್ವಯ ಕಲಂ 7, 13(1)(ಡಿ) ಸಹ ಕಲಂ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯ ಎಂದು ಸರ್ಕಾರ ಪರಿಗಣಿಸಿದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತರನ್ನು ಕೆಲಸದಿಂದ ತೆಗೆದುಹಾಕುವ ಅಧಿಕಾರವುಳ್ಳದ್ದಾಗಿರುತ್ತದೆ ಆದ್ದರಿಂದ ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ)ರ ಅಡಿ ಆಪಾದಿತ ಶ್ರೀಮತಿ ಎಂ. ಸಾವಿತ್ರಿ, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಪಿ.ಸಿ.ಜೆ.ಎಂ. ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ, ಶಿವಮೊಗ್ಗ ಇವರನ್ನು ಕಲಂ 7, 13(1)ಡಿ) ಸಹ ಕಲಂ 13(2)ರ ಲಂಚ ನಿರೋಧ ಕಾಯ್ದೆ 1988ರಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.

ಅದರಂತೆ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಓಇ 339 ಪಿಪಿಇ 2009 ದಿನಾಂಕ 26ನೇ ಡಿಸೆಂಬರ್ 2009.

ಶ್ರೀಮತಿ ಎಂ. ಸಾವಿತ್ರಿ, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಪಿ.ಸಿ.ಜೆ.ಎಂ. ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ, ಶಿವಮೊಗ್ಗ ಇವರನ್ನು ತೆಗೆದು ಹಾಕುವ ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತ ಶ್ರೀಮತಿ ಎಂ. ಸಾವಿತ್ರಿ, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಪಿ.ಸಿ.ಜೆ.ಎಂ ಮತ್ತು ಎ.ಸಿಜೆ.ಎಂ. ನ್ಯಾಯಾಲಯ, ಶಿವಮೊಗ್ಗ ಇವರ ವಿರುದ್ಧ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ ಕಲಂ 13(2)ರ ಲಂಚ ನಿರೋಧಕ ಕಾಯ್ದೆ 1988ರ ಪ್ರಕಾರ ಶಿಕ್ಷಾರ್ಹ ಅಪರಾಧಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲು ಕರ್ನಾಟಕ ಲೋಕಾಯುಕ್ತ ಪೊಲೀಸರಿಗೆ ಈ ಮೂಲಕ ಅನುಮತಿ ನೀಡಲಾಗಿದೆ.

ಆದ್ದರಿಂದ ಕರ್ನಾಟಕ ಸರ್ಕಾರದ (ವ್ಯವಹಾರ) ನಿರ್ವಹಣೆ ನಿಯಮಾವಳಿ 1977ರ ನಿಯಮ 19(1)ರನ್ವಯ ಈ ಮೇಲ್ಕಂಡ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ನನ್ನ ಸಹಿಯ ಅಡಿಯಲ್ಲಿ ದಿನಾಂಕ : 26ನೇ ಡಿಸೆಂಬರ್ 2009ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ಕೆ.ಸಿ. ಸಿದ್ದಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ
(ಕಾ ಮತ್ತು ಸು. ಕಾಫಿಪೋಸಾ ಮತ್ತು ಅಭಿಯೋಗ)

ಪಿಆರ್ 37

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ: ದಾಂಡೇಲಿ-ಅಣಶಿ ಹುಲಿ ಸಂರಕ್ಷಣಾ ಪ್ರದೇಶದಿಂದ ಸ್ಥಳಾಂತರಗೊಂಡ ಗ್ರಾಮಸ್ಥರಿಗೆ ಪುನರ್ವಸತಿಗೊಳಿಸಲು ಇರುವ ಯೋಜನೆಯನ್ನು ಉಸ್ತುವಾರಿ/ಜಾರಿಗೊಳಿಸಲು ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: 1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)ರವರ ಪತ್ರದ ಸಂಖ್ಯೆ : ಸಿ 3/ವಜೀ/ಸಿಆರ್-7/2009-10 ದಿನಾಂಕ : 12-05-2009.

ಪ್ರಸ್ತಾವನೆ :

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಇವರು ಮೇಲೆ (1)ರಲ್ಲಿ ಓದಲಾದ ದಿನಾಂಕ : 12-05-2009ರ ಪತ್ರದಲ್ಲಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಮಾರ್ಗಸೂಚಿ ಸಂಖ್ಯೆ : 4.2.3. ಮತ್ತು 4.2.4.ರ ಪ್ರಕಾರ ದಾಂಡೇಲಿ ಅಣಶಿ ಹುಲಿ ಸಂರಕ್ಷಣಾ ಪ್ರದೇಶದಲ್ಲಿನ ಗ್ರಾಮಸ್ಥರನ್ನು ಪುನರ್ವಸತಿಗೊಳಿಸಲು ಯೋಜನೆಯ ಉಸ್ತುವಾರಿ/ಜಾರಿಗೊಳಿಸಲು ರಾಜ್ಯ ಮಟ್ಟದ ಉಸ್ತುವಾರಿ ಸಮಿತಿ ಹಾಗೂ ಜಿಲ್ಲಾ ಮಟ್ಟದ ಜಾರಿ ಸಮಿತಿಗಳನ್ನು ರಚಿಸಲು ಕೋರಿರುತ್ತಾರೆ :-

ಆದ್ದರಿಂದ ಈ ಕೆಳಗಿನಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಅಪಜೀ 78 ಎಫ್‌ಡಬ್ಲ್ಯೂಎಲ್ 2009. ಬೆಂಗಳೂರು ದಿನಾಂಕ 18ನೇ ಡಿಸೆಂಬರ್ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ದಾಂಡೇಲಿ-ಅಣಶಿ ಹುಲಿ ಸಂರಕ್ಷಣಾ ಪ್ರದೇಶದಿಂದ ಸ್ಥಳಾಂತರಗೊಂಡ ಗ್ರಾಮಸ್ಥರಿಗೆ ಪುನರ್ವಸತಿಗೊಳಿಸಲು ಇರುವ ಯೋಜನೆಯ ಉಸ್ತುವಾರಿ ಜಾರಿಗೊಳಿಸಲು ರಾಜ್ಯ ಮಟ್ಟದ ಉಸ್ತುವಾರಿ ಸಮಿತಿ ಹಾಗೂ ಜಿಲ್ಲಾ ಮಟ್ಟದ ಜಾರಿ ಸಮಿತಿಗೆ ಈ ಕೆಳಕಂಡವರನ್ನು ಸದಸ್ಯರನ್ನಾಗಿ ನೇಮಕ ಮಾಡಿದೆ.

ಅ) ರಾಜ್ಯ ಮಟ್ಟದ ಉಸ್ತುವಾರಿ ಸಮಿತಿ :-

1.	ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ	ಅಧ್ಯಕ್ಷರು
2.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ	ಸದಸ್ಯರು
3.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	ಸದಸ್ಯರು
4.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ	ಸದಸ್ಯರು
5	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ	ಸದಸ್ಯರು
6.	ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ, ಅರಣ್ಯ ಭವನ, ಬೆಂಗಳೂರು	ಸದಸ್ಯರು

7.	ಸಂಬಂಧಿಸಿದ ಹುಲಿ ಸಂರಕ್ಷಣಾ ಪ್ರಾಧಿಕಾರದ ಅಧಿಕಾರೇತರ ಸದಸ್ಯರು (ದಾಂಡೇಲಿ ಮತ್ತು ಹುಲಿ ಸಂರಕ್ಷಣೆ) 1. ಶ್ರೀಮತಿ ಸಂಧ್ಯಾ ಪಿ. ದೇಸಾಯಿ ಪರಿಸರ ಅಭಿವೃದ್ಧಿ ಸಮಿತಿ, ಶೇವಾಳಿ ಗ್ರಾಮ, ಗುಂದ ವನ್ಯಜೀವಿ ವಲಯ, ಜೋಯಿಡಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ. 2. ಶ್ರೀ ನಂದು ಎಲ್. ತೇಲಿ. ಪರಿಸರ ಅಭಿವೃದ್ಧಿ ಸಮಿತಿ, ಪಣಸೋಲಿ ಗ್ರಾಮ, ಪಣಸೋಲಿ ವನ್ಯಜೀವಿ ವಲಯ, ಜೋಯಿಡಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ. 3. ಶ್ರೀ ಅನಂತ ಹೆಗಡೆ ಅಶೀಸರ, ವೃಕ್ಷಲಕ್ಷ- ಅಂದೋಲನ, ಶಿರ್ಸಿ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.	ಸದಸ್ಯರು
8.	ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು, ಕರ್ನಾಟಕ	ಸದಸ್ಯ ಕಾರ್ಯದರ್ಶಿ

ಬಿ) ಜಿಲ್ಲಾ ಮಟ್ಟದ ಜಾರಿ ಸಮಿತಿ :-

1.	ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ, ಕಾರವಾರ	ಅಧ್ಯಕ್ಷರು
2.	ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ದಾಂಡೇಲಿ.	ಸದಸ್ಯ ಕಾರ್ಯದರ್ಶಿ
3.	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕಾರವಾರ	ಸದಸ್ಯರು
4.	ಕಾರ್ಯ ನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸಿರಸಿ ವಿಭಾಗ, ಸಿರಸಿ	ಸದಸ್ಯರು
5.	ಜಿಲ್ಲಾ ಗಿರಿಜನ ಅಭಿವೃದ್ಧಿ ಅಧಿಕಾರಿ ಕಾರವಾರ	ಸದಸ್ಯರು
6.	ಜಿಲ್ಲಾ ವೈಧ್ಯಾಧಿಕಾರಿ, ಕಾರವಾರ	ಸದಸ್ಯರು
7.	ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಕಾರವಾರ	ಸದಸ್ಯರು
8.	ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಾರವಾರ	ಸದಸ್ಯರು
9.	ಕಾರ್ಯ ನಿರ್ವಾಹಕ ಅಭಿಯಂತರರು, ಹೆಸ್ಕಾಂ, ಕಾರವಾರ	ಸದಸ್ಯರು
10.	ಕಾರ್ಯ ನಿರ್ವಾಹಕ ಅಭಿಯಂತರರು, ಸಣ್ಣ, ನೀರಾವರಿ ಇಲಾಖೆ, ಕಾರವಾರ	ಸದಸ್ಯರು
11.	ಕಾರ್ಯ ನಿರ್ವಾಹಕ ಅಭಿಯಂತರರು, ಜಿಲ್ಲೆ ಪಂಚಾಯತ್, ಕಾರವಾರ	ಸದಸ್ಯರು
12.	ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ, ಕಾರವಾರ	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಪಿ.ಆರ್. ಕಲಾವತಿ)

ಸರ್ಕಾರದ ಅಧೀನ ಕಾರ್ಯದರ್ಶಿ

ಪಿಆರ್ 38 ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ತಿದ್ದುಪಡಿ ಆದೇಶ ಸಂಖ್ಯೆ : ಪಿಡಿ 103 ಎಸ್‌ಎಸ್.ಎಂ. 2008, ಬೆಂಗಳೂರು ದಿನಾಂಕ : 30-12--2009

ಸಮ ಸಂಖ್ಯೆಯ ದಿನಾಂಕ 26-12-2009ರ ಸರ್ಕಾರದ ಆದೇಶದಲ್ಲಿನ ಕೆಳಕಂಡ ಆದೇಶದ ಭಾಗವನ್ನು

ಕ್ರ ಸಂ.	ಹುದ್ದೆಯ ಪದನಾಮ	ವೇತನ ಶ್ರೇಣಿ	ಹುದ್ದೆ ಮಂಜೂರಾದ ಕಛೇರಿ
ಸಮೂಹ 'ಬಿ'			
1.	ಪತ್ರಾಂಕಿತ ವ್ಯವಸ್ಥಾಪಕರು (ಆಡಳಿತ)	ರೂ. 11400-21600	ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕೇಂದ್ರ ಕಛೇರಿ, ಬೆಂಗಳೂರು.
2.	ಪತ್ರಾಂಕಿತ ವ್ಯವಸ್ಥಾಪಕರು (ಲೆಕ್ಕಪತ್ರ)	ರೂ. 11400-21600	ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕೇಂದ್ರ ಕಛೇರಿ. ಬೆಂಗಳೂರು

ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು

ಕ್ರ. ಸಂ.	ಹುದ್ದೆಯ ಪದನಾಮ	ಮಂಜೂರಾದ ಹುದ್ದೆಗಳ ಸಂಖ್ಯೆ ಮತ್ತು ವೇತನ ಶ್ರೇಣಿ	ಹುದ್ದೆ ಮಂಜೂರಾದ ಕಛೇರಿ
ಸಮೂಹ 'ಬಿ'			
1.	ಪತ್ರಾಂಕಿತ ವ್ಯವಸ್ಥಾಪಕರು	02 ಹುದ್ದೆಗಳು ರೂ. 11400–21600	ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕೇಂದ್ರ ಕಛೇರಿ, ಬೆಂಗಳೂರು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ವಿ. ಸಾಯಿಬಾಬಾ)
ಸರ್ಕಾರದ ಅಧೀನ ಕಾರ್ಯದರ್ಶಿ
15 Up Stream or downstream mini hydel schemes already allotted to other companies ahluld not be affected.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್.43

ಎಸ್. ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ : ಇಎನ್ 135 ಎನ್‌ಸಿಇ 2007, ಬೆಂಗಳೂರು, ದಿನಾಂಕ : 19-12-2009

ಮೆ॥ ಸಿದ್ಧಿ ಶ್ರೀ ಶಿವ ಪವರ್ಸ್ ಲಿಮಿಟೆಡ್ ಇವರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಪುತ್ತಿಗೆ ಗ್ರಾಮದ ಬಳಿ ಕಾಂಚಿಪಾಯಲು ಹತ್ತಿರ ಮುಲ್ಕಿ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಶಾಂಭವಿ ಕಿರು ಜಲ ವಿದ್ಯುತ್ ಯೋಜನೆಯನ್ನು (Weir-Latitude : 13°3'30" Longitude : 74°47'00") ಈ ಕೆಳಗಿನ ನಿಬಂಧನೆಗೊಳಪಟ್ಟ ಹಂಚಿಕೆ ಮಾಡಲಾಗಿದೆ :-

1(ಅ) ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ. ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ್ಕೆ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಪರಿಷ್ಕರಿಸಲು ಮೆಗಾವಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

2(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಅವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3 ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸತಕ್ಕದ್ದು.

4 ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5 ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6 ಯೋಜನಾ ಅಭಿವೃದ್ಧಿದಾರರು ವಿದ್ಯುತ್‌ನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್‌ನ್ನು ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7 ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ/ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8 ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್/ನೀರಾವರಿ ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

9 ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

10 ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

11 ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

12 ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರೆ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್.45

ಎಸ್. ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ.

ENERGY SECRETARIAT

Sub : Change of name of the company from M/s Bobba Aviation Services Private Limited to M/s Soham Mannapitlu Power Private Limited-reg.

Read :
1. Government order No. DE 242 NCE 2002, dated : 8-10-2002
2. Government order No. DE 242 NCE 2003, dated : 7-5-2003
3. Corrigendum No. DE 78 NCE 2003, dated 4-4-2003
4. Government order No. EN 270 NCE 2007, dated : 3-3-2008
5. Government order No. EN 416 NCE 2008 dated : 28-2-2009
6. Government order No. EN 426 NCE 2009, dated : 30-7-2009
7. Letter No. KRED/06/Bobba/09/2043, dated 20/26-6-2009 received from the Managing Director Karnataka Renewable Energy Development Limited, Bangalore
8. Government Letter No. EN 391 NCE 2009, dated 25-8-2009
9. Letter No. KRED/06/mannapitlu/09/3574, dated 02/03-11-2009 received from the Managing Director Karnataka Renewable Energy Development Limited, Bangalore.

* * *

Preamble :

In the Government Order read at (1) & (2) above, sanction has been accorded to implement 9.00 MW mini hydel power project across Puchamogaru stream of Karkala Taluk, Udupi district to M/s Bobba Power Private Limited and approval was also accorded for enchancement of capacity of the said mini hydel power project from 9.00 MW to 15.00 MW.

In the Corrigendum read at (3) above, the company's name has been changed from M/s Bobba Power Projects Private Limited to M/s Bobba Power Project (A division of Bobba Aviation Services (P) Limited).

In the Government orders read a (4), (5) & (6) above, extension of time has been granted from time to time for implementation of the above project.

Based on the request of the M/s Soham Mannapitlu Power Limited for change of name of the compay from M/s Bobba Aviation Services Pvt. Ltd. To M/s Soham Mannapitlu Power Limited, managing Director, Karnataka Renewable Energy Development Limited, Bangalore vide his letter read at (7) above while forwarding the request of the company to Government has informed that there is litigation pending between Sri Vinod Pinto and others V/s M/s Bobba Aviation Services Pvt. Ltd. Before the Hon'ble High Court of Karnataka in W.P. No. 15559/07.

In the Government Letter read at (8) above. Managing Director, Karnataka Renewable Energy Development Limited, Bangalore was asked to take necessary action for the following point :-

> "It appears, there is litigation pending between Sri Vinod Pinto and others V/s M/s Bobba Aviation Services Pvt. Ltd. Before the Hon'ble High Court of Karnataka in W.P. No. 15559/07. It is mandatory on the part of Director of Soham Mannapitlu Power Private Limited to file a memo before the Hon'ble HCK in W.P. No. : 15559/07 reporting the change of name of 2nd respondent.

ANNEXURE

List of VINIV-INC and other allied Companies.

1) VINIV-INC

2) VINIV-INC Foundation

3) VINIV-INC Ultra Super Market

4) VINIV-INC Properties

5) VINIV-INC Business Solutions Pvt. Ltd

6) VINIV-INC Education Trust

7) VINIV-INC Help Mart Pvt. Ltd.

8) VINIV-INC Info Solutions Pvt. Ltd.

9) VINIV-INC Times

10) VINIV-INC Matrimony

11) VINIV-INC News Net

12) VINIV-INC Souharda Credit Co-op. Society Ltd.

13) VINIV-INC Insurance Solution

14) VIKAS BUILDERS

ಸಹಕಾರ ಸಚಿವಾಲಯ

ವಿಷಯ : ದಿನಾಂಕ 31-03-2010 ರೊಳಗೆ ನಡೆಸಬೇಕಾಗಿರುವ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ಬೆಳಗಾವಿ ಇದರ ಆಡಳಿತ ಸಮಿತಿಯ ಚುನಾವಣೆಯನ್ನು ಮುಂದೂಡುವ ಬಗ್ಗೆ.

ಓದಲಾಗಿದೆ: ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ ಇದರ ಅಧ್ಯಕ್ಷರ ಪತ್ರ ಸಂಖ್ಯೆ: ಎಂ.ಸಿ.ಎಸ್ಎಂ/ಬಿಒಡಿ/2009-10/106, ದಿನಾಂಕ 16-11-2009 ಮತ್ತು 10-12-2009.

ಪ್ರಸ್ತಾವನೆ :

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ (2)ರಡಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ಬೆಳಗಾವಿ ಇದು ಮಾರ್ಚಿ 2010ರಲ್ಲಿ ತನ್ನ ಆಡಳಿತ ಸಮಿತಿಗೆ ಚುನಾವಣೆಯನ್ನು ನಡೆಸಬೇಕಾಗಿದ್ದು ಸದರಿ ಕಾರ್ಖಾನೆಯ ಅಧ್ಯಕ್ಷರು ಮೇಲೆ ಓದಲಾದ ಪತ್ರದಲ್ಲಿ ಅವರ ಕಾರ್ಖಾನೆಯ ಕಾರ್ಯಕ್ಷೇತ್ರವು ನೆರೆ ಹಾವಳಿಯಿಂದಾಗಿ ಸಂಕಷ್ಟಕ್ಕೆ ಒಳಗಾಗಿರುವುದರಿಂದ ಅವರ ಕಾರ್ಖಾನೆಯ ರಸ್ತೆ ಮತ್ತಿತರ ಕಾಮಗಾರಿಗಳು ಹಾಳಾಗಿದ್ದರಿಂದ ಮತ್ತು ಅವರ ಆಡಳಿತ ಮಂಡಳಿಯವರು ಸಹ ನೆರೆ ಸಂತ್ರಸ್ಥರ ನೆರವಿಗೆ ಬರುತ್ತಿರುವುದರಿಂದ ವಾರ್ಷಿಕ ಮಹಾಸಭೆಯನ್ನು ಮುಂದೂಡಲಾಗಿದ್ದು ಅವರ ಪ್ರಾಜೆಕ್ಟಿನ ಸಿವಿಲ್ ಕಾಮಗಾರಿಗಳು ಮುಗಿದಿದ್ದರೂ ಸಹ ಕಾರ್ಖಾನೆಯ ಕಮೀಷನಿಂಗ್ ಸ್ಥಗಿತಗೊಂಡಿರುವುದರಿಂದ ಮಾರ್ಚಿ 2010ರಲ್ಲಿ ನಡೆಯಬೇಕಿರುವ ಆಡಳಿತ ಸಮಿತಿಯ ಚುನಾವಣೆಯನ್ನು ಒಂದು ವರ್ಷ ಕಾಲ ಮುಂದೂಡಬೇಕೇಂದು ಕೋರಿದ್ದಾರೆ.

ಸದರಿ ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 213 ಸಿಎಲ್ಎಂ 2009, ಬೆಂಗಳೂರು, ದಿನಾಂಕ: 4ನೇ ಜನವರಿ 2010.

ಮೇಲಿನ ಪರಿಸ್ಥಿತಿಯಲ್ಲಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ ಇದಕ್ಕೆ ಅನ್ವಯವಾಗುವಂತೆ ಕರ್ನಾಟಕ ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(4) ಮತ್ತು 121ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಅಧಿನಿಯಮದ ಪ್ರಕರಣ 28ಎ(4), 28ಎ(5), 28ಬಿ(2), 29ಎಃ(4) ಮತ್ತು 39ಎ(2) ಅನ್ನು ಮಾರ್ಪಾಟು ಮಾಡಿ ಸದರಿ ಸಹಕಾರ ಸಂಘದ ಆಡಳಿತ ಸಮಿತಿಗೆ ಚುನಾವಣೆಯನ್ನು ದಿನಾಂಕ 30-09-2010ರೊಳಗೆ ನಡೆಸುವಂತೆ ಆದೇಶಿಸುತ್ತದೆ.

ಸೂಚನೆ: ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ 30-09-2010ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿಯು ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ

ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣಗಳ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು. ಈ ಆದೇಶದ ಮೂಲಕ ಮಾರ್ಪಾಡು ಮಾಡಿದಂತೆ ಸದರಿ ಪ್ರಕರಣದ ಹಿಂದಿನ ಕಾರ್ಯಾಚರಣೆ ಮೇಲೆ ಯಾವುದೇ ಪರಿಣಾಮ ಉಂಟುಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.89

ಆರ್.ಎಸ್. ಹುಚ್ಚಾಚಾರಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ

LAW, JUSTICE & HUMAN RIGHTS SECRETARIAT

Sub : Establishment of two more courts of Additional City Civil & Sessions Judges (Special Courts) for trial of CBI Cases at Bangalore

Read : 1. Letter dated 24-7-2009 from the Hon'ble Prime Minister addressed to the Hon'ble Chief Minister of Karnataka

(2) Letter No. GOB II 281/2009 dated 30-10-2009.

Preamble :

Hon'ble Prime Minister of India in his letter dated 24-7-2009 addressed to the Hon'ble Chief Minister of Karnataka has informed that in view of pendency of large number of CBI Cases awaiting trial and also as per the recommendation by the Chief Justice of India, it has been decided to establish 71 Addl. Special Courts at various places in the country. Two of these courts will be at Bangalore. The expenditure on account of the said two Courts at Bangalore will have to be met initially the State Government and the same is fully re-imbursible by the Union Government subsequently. In response to the Hon'ble Prime Minister letter, Government of Karnataka have conveyed their concurrence to establish the said two addl. Special Courts at Bangalore. Further, the Registrar General, Hon'ble High Court of Karnataka in his letter read at Sl.No. 2 above, has sent proposal to Government along with staffing pattern and statements of recurring and non-recurring charges.

The proposal has been examined by the Government in detail and hence the Orders as under.

Government Order No. LAW 189 LCE 2009, Bangalore, Dated 1st January 2010

After careful consideration of all the aspects, Government are pleased to accord approval to establish two Courts of Additional City & Sessions Judges (Special Courts) for trial of CBI cases at Bangalore, together with the post of Presiding Officer and the following non-gazetted staff :

Sl.No.	Name of the Post	Number of Posts	
		For One Court	For Two Courts
1	Addl. City Civil and Sessions Judge	1	2
2	Judgement Writers	2	4
3	Sheristedars	2	4
4	F.D.A.s	2	4
5	S.D.A.s	2	4
6	Typist	1	2
7	Attender	1	2
8	Peon	2	4
	Total	**13**	**26**

Government hereby accord approval to incur recurring and non-recurring expenditure in this behalf under the Head of Account "2014-Administration of Justice-00-105 Civil & Sessions Courts -0-00-105 Civil & Sessions Courts-0-03-Special Courts for trial of CBI Cases.

ಯೋಜನಾ ಪ್ರದೇಶದ ವ್ಯಾಪ್ತಿಯಿಂದ ಹೊರತುಪಡಿಸಿದೆ ಹಾಗೂ ಸದರಿ ಜಮೀನಿಗೆ ಮಹಾ ಯೋಜನೆಯಲ್ಲಿ ಕಾಯ್ದಿರಿಸಲಾಗಿದ್ದ ಕೈಗಾರಿಕಾ ಉಪಯೋಗದ ಭೂ ಬಳಕೆಯನ್ನು ಸಹಾ ರದ್ದುಪಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ಆರ್. 96

ಸಿ. ಟಿ. ನಾರಾಯಣಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ.

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಸಂಖ್ಯೆ : ಪಸಂಮೀ 271 ಪಅಸೇ 2009, ಬೆಂಗಳೂರು. ದಿನಾಂಕ 30ನೇ ಡಿಸೆಂಬರ್ 2009

ಸೇರ್ಪಡೆ

ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 80 ಪಅಸೇ 2005, ದಿನಾಂಕ : 13-06-2005ರ ಅನುಬಂಧ-II ರಲ್ಲಿ ಇಲಾಖಾ ನಿರ್ದೇಶಕರಿಗೆ ಪ್ರತ್ಯಾಯೋಜಿಸಿರುವ ಆಡಳಿತಾತ್ಮಕ ಅಧಿಕಾರಿಗಳ ಮುಂದುವರಿಕೆಯಾಗಿ ಕ್ರಮ ಸಂಖ್ಯೆ (5)ರ ನಂತರ ಈ ಕೆಳಕಂಡ ಆಡಳಿತಾತ್ಮಕ ಅಧಿಕಾರವನ್ನು ಸೇರ್ಪಡೆ ಮಾಡಿ ಓದಿಕೊಳ್ಳತಕ್ಕದ್ದು.

"(6) ಇಲಾಖೆಯ ಅಪರ/ಜಂಟಿ ನಿರ್ದೇಶಕರುಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳ ವಾರ್ಷಿಕ ವೇತನ ಬಡ್ತಿ, ಸಮಯಾವಧಿ ವೇತನ ಶ್ರೇಣಿ, ಸ್ವಯಂಚಾಲಿತ ವೇತನ ಶ್ರೇಣಿ, ವೈದ್ಯಕೀಯ ಮರುಪಾವತಿ, ಸಾಮಾನ್ಯ ಭವಿಷ್ಯ ನಿಧಿ ಮುಂಗಡ ಇವುಗಳಿಗೆ ಮಂಜೂರಾತಿ ನೀಡುವ ಕೆಲಸವನ್ನೂ ಸಹ ನಿರ್ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ಆರ್. 97

ಬಿ. ಕೆ. ಶ್ರೀನಿವಾಸಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಪಶು ಸಂಗೋಪನೆ)

ENERGY SECRETARIAT

Sub : Tax concessions to all Independent Power Projects under Entry Tax, Stamp duty & Registration charges.

Read: Govt. Order No. CI/233/SPI/2008, dated 28.02.2009.

Preamble:

The New Industrial Policy 2009-14 provides for exemptions & concessions to New Industries set up in the State of Karnataka depending on the zones in which the same are set up.

However the power projects are not covered for such concessions in the said policy. The Government having extended such concessions to power projects of the IPP's under "New Industrial Policy 2006-11 with a separate order vide G.O. No.: DE23 PPC 97, Bangalore dated 30.06.2007, to promote the power projects in the State of Karnataka to harness the available potential to add to the Electricity resources, the same needs to be further promoted for the projects covered under the New Industrial Policy 2009-14 as well.

The intentions of the Government was to extend the concessions, so that the Regulator takes into account such concessions to bring down the purchase cost by the ESCOMs, which in turn brings down the consumer's tariff.

The relevant clause in the New Industrial Policy 2009-14 with regard to exemption from entry tax, stamp duty & concessional Registration charges are as under :-

1. Exemption from Entry tax	MSME, Large & Mega Projects :- 100% exemption from payment of ET on 'Plant & Machinery and Capital Goods' for an initial period of 3 years from the date of commencement of project implementation. For this

	purpose, the term 'Plant & Machinery and Capital Goods' also includes plant & machinery, equipment etc. including machineries for captive generation of Electricity. On raw, materials, inputs, component parts & consumables(excluding petroleum products) {wherever applicable} for a period of 5 years from the date of commencement of commercial production In Zone 1,2 & 3 Zone – 4: Nil.
2. Exemption from stamp duty	MSME, Large & Mega Projects :- Stamp duty to be paid in respect of (i) loan agreements, credit deeds, mortgage and hypothecation deeds executed for availing term loans from State Government & or State Financial Development Corporation, Industrial Investment Development Corporation, National Level Financial Institutions, Commercial Banks, RRBs, Co operative Banks, KVIB/KVIC,-Karnataka State SC/ST Development Corporation, Karnataka State Minority Development Corporation and other institutions which may be notified by the Government from time to time for the initial period of five years only and (ii) for lease deeds, lease-cum-sale and absolute sale deeds executed by industrial enterprises in respect of industrial plots, sheds, industrial tenements, by KIADB, KSSIDC, KEONICS, KSIIDC, Industrial Co-operatives and approved private industrial estates shall be exempted as below : Zone 1&2 : 100% Zone 3 : 75% Zone 4 : Nil
3. Concessional Registration charges	MSME, Large & Mega Projects :- For all loan document & sale deeds as specified under exemption from stamp duty under New Industrial Policy 2009-14, registration charges shall be at a concessional rate of Rs. 1000.

Note :

(i) The exemption of Stamp duty and concessional registration charges are also applicable to lands purchased under section 109 of the KLR Act and also for direct purchase of industrially converted lands for the projects approved by SHLCC/SLSWCC/DLSWCC. This incentive will also be applicable for the land transferred by KIADB to land owners as compensation for the acquired land.

(ii)

The exemption of Stamp duty and concessional registration charges are also available for registration of final sale deed in respect of lands, sheds, plots, industrial tenements after the expiry of lease period at the rate as specified in the industrial policy which was in vogue at the time of execution of lease-cum-sale deed.

The matter has been examined at Government level.

Hence the order.

Government Order No. EN 95 EBS 2009 Bangalore, Dated 29th December 2009

Government is pleased to accord approval for extending the tax concessions in respect of Entry Tax, Stamp Duty & Registration charges which are available under the New Industrial Policy 2009-14 to all the New Power Projects of the IPP.

This order issues with the concurrence of the Finance Department vide U.O. Note FD 5 CET 2009 dated 01-09-2009.

By Order and in the name of the Governor of Karnataka,
(Sujathamma)
Desk Officer,
Energy Department.

PR. 47

ಇಂಧನ ಸಚಿವಾಲಯ

ವಿಷಯ : ವಿದ್ಯುತ್ ಪರಿವೀಕ್ಷಣಾ ಇಲಾಖೆಯ ಮುಖ್ಯ ವಿದ್ಯುತ್ ಪರಿವೀಕ್ಷಕರು ಹಾಗೂ 7 ಅಧಿಕಾರಿ/ನೌಕರರ ವಿರುದ್ಧ ಮಾಡಿರುವ ಆಪಾದನೆಗಳನ್ನು ಕೈಬಿಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಇಎನ್ 132 ಇಬಿಎಸ್ 98 ದಿನಾಂಕ : 31.12.1998.
2. ಲೋಕಾಯುಕ್ತರವರ ಪತ್ರ ಸಂಖ್ಯೆ : Compt/Lok/BCD-124/1999/ARE-4 ದಿನಾಂಕ : 26.06.2007.
3. ಸರ್ಕಾರಿ ಆದೇಶ ಸಂಖ್ಯೆ : ಇಎನ್ 69 ಇಬಿಎಸ್ 2007 ದಿನಾಂಕ : 01.12.2007.
4. ಅಪರ ನಿಂಬಂಧಕರು ವಿಚಾರಣೆ-4 ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ವಿಚಾರಣಾ ವರದಿ ಸಂಖ್ಯೆ : Lok/ARE-4/14-A/ENQ-4/2008 ದಿನಾಂಕ : 31.10.2009.
5. ಕರ್ನಾಟಕ ಲೋಕಾಯುಕ್ತರ ಅರೆ ಸರ್ಕಾರಿ ಪತ್ರ ಸಂಖ್ಯೆ : Lok/ARE-4 /ENQ-4/2008 ದಿನಾಂಕ : 25.11.2009.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ದಿನಾಂಕ :21.12.1998 ರಿಂದ 26.12.1998 ರವರೆಗೆ (6 ದಿನಗಳು) ವಿದ್ಯುಚ್ಛಕ್ತಿ ಸುರಕ್ಷತಾ ಸಪ್ತಾಹವನ್ನು ಆಚರಿಸಲು ರೂ. 2.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿತ್ತು. ಈ ಸಂಬಂಧ ಶ್ರೀ ಕೆ. ಶ್ರೀಹರಿ, ಎಂಬುವವರು ದಿನಾಂಕ : 29.01.2000 ಸಾಲಿನಲ್ಲಿ ಮುಖ್ಯ ವಿದ್ಯುತ್ ಪರಿವೀಕ್ಷಕರು ಹಾಗೂ ಇತರೆ 8 ಅಧಿಕಾರಿಗಳು/ಸಿಬ್ಬಂದಿ ವರ್ಗದವರು ರೂ. 20.00 ಲಕ್ಷಗಳನ್ನು ದುರುಪಯೋಗ ಪಡಿಸಿಕೊಂಡಿರುವುದಾಗಿ ಕರ್ನಾಟಕ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದರು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಮಾನ್ಯ ಲೋಕಾಯುಕ್ತ ಬೆಂಗಳೂರು ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರನ್ವಯ ವರದಿಯನ್ನು ಸಲ್ಲಿಸುತ್ತಾ, ಪ್ರತಿವಾದಿ 2–9 ಇವರ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲು ಶಿಫಾರಸ್ಸು ಮಾಡಿ ಪ್ರಕರಣವನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14 ಎ ರಡಿಯಲ್ಲಿ ಲೋಕಾಯುಕ್ತಕ್ಕೆ ಪ್ರಕರಣವನ್ನು ವಹಿಸಿಕೊಡುವಂತೆ ಸರ್ಕಾರದ ಆದೇಶವನ್ನು ಕೋರಿದ್ದರು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಈ ಕೆಳಕಂಡ ಅಧಿಕಾರಿಗಳ ವಿರುದ್ಧ ವಿಚಾರಣೆಯನ್ನು ನಡೆಸಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ. ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14 ಎ ಅಡಿಯಲ್ಲಿ ಲೋಕಾಯುಕ್ತರಿಗೆ ಪ್ರಕರಣವನ್ನು ವಹಿಸಿಕೊಡಲಾಗಿತ್ತು :-

(1) ಶ್ರೀ ಡಿ.ಹೆಚ್. ಬಸವರಾಜು, ವಿದ್ಯುತ್ ಪರಿವೀಕ್ಷಕರು
(2) ಶ್ರೀ ಎಂ. ಎಸ್. ಬಸವರಾಜು, ವಿದ್ಯುತ್ ಪರಿವೀಕ್ಷಕರು
(3) ಶ್ರೀ ಆಂಜನಪ್ಪ, ಉಪ ವಿದ್ಯುತ್ ಪರಿವೀಕ್ಷಕರು, ಕೇಂದ್ರ ಕಛೇರಿ
(4) ಶ್ರೀ ಕೆ.ಬಿ ಶಶಿರಾಜ್, ಉಪ ವಿದ್ಯುತ್ ಪರಿವೀಕ್ಷಕರು, ಕೇಂದ್ರ ಕಛೇರಿ
(5) ಶ್ರೀ ವೈ. ವೆಂಕಪ್ಪ ಮೂಲ್ಯ, ಸಹಾಯಕ ಲೆಕ್ಕಾಧಿಕಾರಿ (ಆಡಳಿತ)
(6) ಶ್ರೀ ಕೆ. ಎಂ. ಸುಬ್ಬಕ್ಕಿ, ಪ್ರಥಮ ದರ್ಜೆ ಸಹಾಯಕರು, ಕೇಂದ್ರ ಕಛೇರಿ

(7) ಶ್ರೀ ಬಿ. ಪಿ. ನಾಗರಾಜು, ಉಪ ವಿದ್ಯುತ್ ಪರಿವೀಕ್ಷಕರು, ಮತ್ತು

(8) ಶ್ರೀ ಎ. ಜೆ. ಕಾಂತರಾಜ, ಉಪ ವಿದ್ಯುತ್ ಪರಿವೀಕ್ಷಕರು

ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ ಅಪರ ನಿಂಬಂಧಕರು ವಿವಾರಣೆ 4 ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ವಿಚಾರಣಾ ವರದಿಯಲ್ಲಿ ಆಪಾದಿತ ಸರ್ಕಾರಿ ನೌಕರ 1 ರಿಂದ 8 ಇವರ ವಿರುದ್ಧ ಹೊರಿಸಲಾದ ಆಪಾದನೆಗಳು ಸಾಬೀತಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಮೇಲೆ ಓದಲಾದ (5)ರ ಅರೆ ಸರ್ಕಾರಿ ಪತ್ರದಲ್ಲಿ ಮಾನ್ಯ ಲೋಕಾಯುಕ್ತರು ಆಪಾದಿತ ಸರ್ಕಾರಿ ನೌಕರರ ವಿರುದ್ಧ ಹೊರಿಸಲಾದ ಆಪಾದನೆಗಳು ಸಾಬೀತಾಗಿರುವುದಿಲ್ಲ, ಮುಂದುವರೆದು ಇವರ ಮೇಲೆ ಹೊರಿಸಲಾದ ನಡವಳಿಯನ್ನು ಕೈಬಿಡುವಂತೆ ತಿಳಿಸಿರುತ್ತಾರೆ.

ಈ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ :–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 69 ಇಬಿಎಸ್ 2007, ಬೆಂಗಳೂರು, ದಿನಾಂಕ: 29ನೇ ಡಿಸೆಂಬರ್ 2009.

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಮುಖ್ಯ ವಿದ್ಯುತ್ ಪರಿವೀಕ್ಷಣಾಲಯದ ಕೆಳಕಂಡ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ಹೊರಿಸಲಾದ ಆಪಾದನೆಗಳು ಸಾಬೀತಾಗದೆ ಇರುವುದರಿಂದ ಇವರ ವಿರುದ್ಧ ಮಾಡಲಾದ ಆಪಾದನೆಗಳನ್ನು ಕೈಬಿಡಲಾಗಿದೆ :–

(1) ಶ್ರೀ ಡಿ.ಹೆಚ್. ಬಸವರಾಜು, ವಿದ್ಯುತ್ ಪರಿವೀಕ್ಷಕರು

(2) ಶ್ರೀ ಎಂ. ಎಸ್. ಬಸವರಾಜು, ವಿದ್ಯುತ್ ಪರಿವೀಕ್ಷಕರು

(3) ಶ್ರೀ ಆಂಜನಪ್ಪ, ಉಪ ವಿದ್ಯುತ್ ಪರಿವೀಕ್ಷಕರು, ಕೇಂದ್ರ ಕಛೇರಿ

(4) ಶ್ರೀ ಕೆ. ಬಿ. ಶಶಿರಾಜ್, ಉಪ ವಿದ್ಯುತ್ ಪರಿವೀಕ್ಷಕರು, ಕೇಂದ್ರ ಕಛೇರಿ

(5) ಶ್ರೀ ವೈ. ವೆಂಕಪ್ಪ ಮೂಲ್ಯ, ಸಹಾಯಕ ಲೆಕ್ಕಾಧಿಕಾರಿ (ಆಡಳಿತ)

(6) ಶ್ರೀ ಕೆ. ಎಂ. ಸುಬ್ಬಕ್ಕಿ, ಪ್ರಥಮ ದರ್ಜೆ ಸಹಾಯಕರು, ಕೇಂದ್ರ ಕಛೇರಿ

(7) ಶ್ರೀ ಬಿ. ಪಿ. ನಾಗರಾಜು, ಉಪ ವಿದ್ಯುತ್ ಪರಿವೀಕ್ಷಕರು, ಮತ್ತು

(8) ಶ್ರೀ ಎ. ಜೆ. ಕಾಂತರಾಜ, ಉಪ ವಿದ್ಯುತ್ ಪರಿವೀಕ್ಷಕರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 48

(ಸುಜಾತಮ್ಮ)

ಪೀಠಾಧಿಕಾರಿ, ಇಂಧನ ಇಲಾಖೆ

ಜಲ ಸಂಪನ್ಮೂಲ ಸಚಿವಾಲಯ

ವಿಷಯ: ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆಯಡಿ ರಚಿಸಲ್ಪಟ್ಟ ಕೆರೆ ಬಳಕೆದಾರರ ಸಂಘಗಳ ಕಾರ್ಯಚಟುವಟಿಕೆಗಳ ಮೇಲುಸ್ತುವಾರಿ ಹಾಗೂ ಮಾರ್ಗದರ್ಶನ ನೀಡಲು ತಾಲ್ಲೂಕು ಮಟ್ಟದ ಸಮನ್ವಯ ಸಮಿತಿಯನ್ನು ರಚಿಸುವ ಬಗ್ಗೆ ಆದೇಶ.

ಓದಲಾಗಿದೆ: 1) ಆದೇಶ ಸಂ : ಸನೀಇ 29 ಜೆಎಸ್‌ವೈ 2002 ದಿನಾಂಕ 27.03.2003

2) ಆದೇಶ ಸಂ : ಸನೀಇ 14 ಕೆಜಿದು 2006 (ಭಾಗ) ದಿನಾಂಕ 22.11.2007

3) ಆದೇಶ ಸಂ : ಸನೀಇ 04 ಜಸಂಯೋ 2008 ದಿನಾಂಕ 31.08.2009

4) ಪತ್ರ ಸಂಖ್ಯೆ ಜೆ.ಎಸ್.ವೈ.ಎಸ್/ಬೆಂ/ಪಿ.ಎಂ.ಜಿ/157/2009–10 ದಿನಾಂಕ : 25.11.2009

ಪ್ರಸ್ತಾವನೆ:

ಜಲಸಂವರ್ಧನೆ ಯೋಜನಾ ಸಂಘದ ಮೂಲಕ ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಸಮುದಾಯಾಧಾರಿತ ಕೆರೆ ನಿರ್ವಹಣೆ ಯೋಜನೆಯನ್ನು ರಾಜ್ಯದ 10 ಜಿಲ್ಲೆಗಳ 34 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲು ಮೇಲೆ ಓದಲಾದ (1)ರ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ. ಆದರನ್ವಯ ಸದರಿ ಯೋಜನೆಯು ಪ್ರಥಮ ಹಂತದಲ್ಲಿ ರಾಜ್ಯದ 10 ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ರಾಯಚೂರು, ಹಾವೇರಿ, ಬಾಗಲಕೋಟೆ, ಬೀದರ್, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ 2002–03 ರಿಂದ 2007–08ರ ಅವಧಿಯಲ್ಲಿ 2005 ಕೆರೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

ಸದರಿ ಯೋಜನೆಯಡಿ ಎರಡನೇ ಹಂತದ ಮುಂದುವರಿದ ಯೋಜನೆಯಡಿ ವಿಶ್ವಬ್ಯಾಂಕಿನ ಹೆಚ್ಚುವರಿ ಆರ್ಥಿಕ ನೆರವಿನೊಂದಿಗೆ ರಾಜ್ಯದ ಬೆಳಗಾವಿ, ಬಿಜಾಪುರ, ಚಿಕ್ಕಮಗಳೂರು, ದಾವಣಗೆರೆ, ಧಾರವಾಡ, ಹಾಸನ, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳ 37 ತಾಲ್ಲೂಕುಗಳಲ್ಲಿ 1224 ಕೆರೆಗಳನ್ನು ರೂ. 306.98 ಕೋಟಿ ವೆಚ್ಚದಲ್ಲಿ ಪುನಶ್ಚೇತನಗೊಳಿಸಲು ಉಲ್ಲೇಖ(2)ರ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ. ತದ ನಂತರ ಉಲ್ಲೇಖ(3)ರ ಆದೇಶದಲ್ಲಿ ಮೊದಲ ಹಂತದ ಪ್ರಾಯೋಗಿಕ ಯೋಜನೆಯಡಿ ಉಳಿತಾಯವಾಗಿರುವ ಮೊತ್ತದಿಂದ ಮೊದಲ ಹಂತದ ಜಿಲ್ಲೆಗಳ 24 ತಾಲ್ಲೂಕುಗಳಲ್ಲಿ 694

ಕೆರೆಗಳನ್ನು ಅಭಿವೃದ್ಧಿಪಡಿಸಲು ಮಂಜೂರಾತಿ ನೀಡಲಾಗಿದೆ. ಹಾಗೂ ಮೊದಲ ಹಂತದ ಮತ್ತು ಮುಂದುವರೆದ ಯೋಜನೆಗಳ ಅನುಷ್ಠಾನಾವಧಿಯನ್ನು ದಿನಾಂಕ : 31.01.2012ರವರೆಗೆ ವಿಸ್ತರಿಸಲಾಗಿದೆ.

ಸದರಿ ಯೋಜನೆಯಡಿ ಸಮುದಾಯದ ಎಲ್ಲಾವರ್ಗದ ಪ್ರತಿನಿಧಿಗಳನ್ನೊಳಗೊಂಡ ಕೆರೆ ಸಂಘಗಳನ್ನು ರಚಿಸಿ ಅವುಗಳ ಮೂಲಕ ಯೋಜನಾ ವರದಿ ತಯಾರಿಸಿ ಹಾಗೂ ಅದರಂತೆ ಯೋಜನೆ ಅನುಷ್ಠಾನಗೊಳಿಸಿ ನಂತರ ಸಮುದಾಯಕ್ಕೆ ಹಸ್ತಾಂತರಿಸುವುದು ಸರ್ಕಾರದ ಉದ್ದೇಶವಾಗಿದೆ. ಈ ಯೋಜನೆಯಡಿ ಕೆರೆ ಅಭಿವೃದ್ಧಿ ಕಾಮಗಾರಿಗಳು, ಬೆಳೆ ಯೋಜನೆ, ನೀರು ನಿರ್ವಹಣೆ, ಅರಣ್ಯೀಕರಣ, ಮೀನುಗಾರಿಕೆ, ಕೃಷಿ ಉತ್ಪನ್ನ ಮಾರಾಟ, ಪಶು ಸಂಗೋಪನೆ, ಜೀವನಾಧಾರಿತ ಮತ್ತು ಆರ್ಥಿಕ ಬಲವರ್ಧನೆ ಚಟುವಟಿಕೆ ಮುಂತಾದವುಗಳ ಬಗ್ಗೆ ಕಾರ್ಯಕ್ರಮವನ್ನು ರೂಪಿಸಿ ಅದರಂತೆ ಅನುಷ್ಠಾನಗೊಳಿಸುವುದು ಕೆರೆ ಸಂಘಗಳ ಜವಾಬ್ದಾರಿಯಾಗಿರುತ್ತದೆ. ಈ ಸಂಘಗಳು ಸರ್ಕಾರದ ವಿವಿಧ ಯೋಜನೆಗಳನ್ನು ಗ್ರಾಮ ಮಟ್ಟದಲ್ಲಿ ಅನುಷ್ಠಾನಗೊಳಿಸಬೇಕಾಗಿದೆ. ಈ ಸಂಘಗಳಿಗೆ ಯೋಜನೆಯ ಅನುಷ್ಠಾನ ಅವಧಿಯಲ್ಲಿ ಹಾಗೂ ತದ ನಂತರ ಕೆರೆಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಿ ಹಾಗೂ ನಿರ್ವಹಣೆಯನ್ನು ಸಮರ್ಪಕವಾಗಿ ಮುಂದುವರಿಸಲು ಸಂಬಂಧಪಟ್ಟ ಇಲಾಖೆಗಳ ಮಾರ್ಗದರ್ಶನ ಅವಶ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ ದಿನಾಂಕ : 24.07.2007ರಂದು ನಡೆದ ಜಲಸಂವರ್ಧನೆ ಯೋಜನಾ ಸಂಘದ 17ನೇ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತಾಲ್ಲೂಕು ಮಟ್ಟದ ಸಮಿತಿಯನ್ನು ರಚಿಸುವ ಬಗ್ಗೆ ನಿರ್ಣಯಿಸಲಾಗಿದೆ. ಅದಲ್ಲದೆ, ದಿನಾಂಕ 27.08.2007 ರಂದು ಯೋಜನಾ ಜಿಲ್ಲೆಗಳ ಉಪ ವಿಭಾಗಾಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾ ಅಧಿಕಾರಿಗಳ ಸಭೆಯಲ್ಲಿ ತಾಲ್ಲೂಕು ಮಟ್ಟದ ಸಮನ್ವಯ ಸಮಿತಿಯನ್ನು ರಚಿಸುವುದು ಅವಶ್ಯವೆಂದು ಅಭಿಪ್ರಾಯ ಪಟ್ಟಿರುವ ಮೇರೆಗೆ ತಾಲ್ಲೂಕು ಮಟ್ಟದ ಸಮನ್ವಯ ಸಮಿತಿಯನ್ನು ರಚಿಸುವಂತೆ ಕಾರ್ಯನಿರ್ವಾಹಕ ನಿರ್ದೇಶಕರು, ಜಲಸಂವರ್ಧನೆ ಯೋಜನಾಸಂಘ ಇವರು ಮೇಲೆ ಓದಲಾದ (4)ರ ಪತ್ರದಲ್ಲಿ ಪ್ರಸ್ತಾಪಿಸಿರುತ್ತಾರೆ. ಈ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 16 ಜಸಂಯೋ 2009, ಬೆಂಗಳೂರು, ದಿನಾಂಕ: 30ನೇ ಡಿಸೆಂಬರ್ 2009.

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣಾ ಯೋಜನೆಯಡಿರಚಿತವಾದ ಕೆರೆ ಬಳಕೆದಾರರ ಸಂಘಗಳಿಗೆ ಯೋಜನೆಯ ಅನುಷ್ಠಾನ ಅವಧಿಯಲ್ಲಿ ಹಾಗೂ ಮುಂದಿನ ಅವಧಿಗೆ ನಿರಂತರ ಉಸ್ತುವಾರಿ ಮತ್ತು ನಿರ್ವಹಣೆ ಸಂದರ್ಭದಲ್ಲಿ ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನ ನೀಡಲು ಈ ಕೆಳಗಿನ ಅಧಿಕಾರಿಗಳನ್ನೊಳಗೊಂಡ ತಾಲ್ಲೂಕು ಮಟ್ಟದ ಸಮನ್ವಯ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರಚಿಸಲಾಗಿದೆ :

1. ಸಂಬಂಧಪಟ್ಟ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಹಣಾ ಅಧಿಕಾರಿ – ಅಧ್ಯಕ್ಷರು
2. ತಾಲ್ಲೂಕಿನ ತಹಶೀಲ್ದಾರರು – ಸದಸ್ಯರು
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾಪಂಚಾಯತ್, ಉಪವಿಭಾಗ – ಸದಸ್ಯರು
4. ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ – ಸದಸ್ಯರು
5. ಸಹಾಯಕ ನಿರ್ದೇಶಕರು/ಸಹಾಯಕ ತೋಟಗಾರಿಕಾ ಅಧಿಕಾರಿ ತೋಟಗಾರಿಕಾ ಇಲಾಖೆ – ಸದಸ್ಯರು
6. ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ – ಸದಸ್ಯರು
7. ಸಹಾಯಕ ನಿರ್ದೇಶಕರು, ಪಶುಸಂಗೋಪನಾ ಮತ್ತು ಪಶುವೈದ್ಯ ಸೇವೆಗಳ ಇಲಾಖೆ – ಸದಸ್ಯರು
8. ವಲಯ ಅರಣ್ಯ ಅಧಿಕಾರಿ (ಸಾಮಾಜಿಕ ಅರಣ್ಯ) – ಸದಸ್ಯರು
9. ಸಮನ್ವಯ ಅಧಿಕಾರಿಗಳು, ಕೃಷಿ ವಿಜ್ಞಾನ ಕೇಂದ್ರ – ಸದಸ್ಯರು
10. ಜಿಲ್ಲಾ ಸಮನ್ವಯಾಧಿಕಾರಿಗಳು, ಕೃಷಿ ವಿಶ್ವ ವಿದ್ಯಾಲಯ, ಬೆಂಗಳೂರು ಮತ್ತು ಧಾರವಾಡ – ಸದಸ್ಯರು
11. ಕಾರ್ಯದರ್ಶಿಗಳು, ಕೃಷಿ ಉತ್ಪನ್ನ ಮಾರಾಟ ಸಮಿತಿ – ಸದಸ್ಯರು
12. ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ – ಸದಸ್ಯರು
13. ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ, ಉಪವಿಭಾಗ –ಸದಸ್ಯ ಕಾರ್ಯದರ್ಶಿ

ಸಮಿತಿಯು ಈ ಕೆಳಕಂಡವರನ್ನು ಈ ಸಂಸ್ಥೆಗಳು ಅಸ್ತಿತ್ವದಲ್ಲಿರುವವರೆಗೆ ವಿಶೇಷ ಪ್ರತಿನಿಧಿಗಳಾಗಿ ಆಹ್ವಾನಿಸುವುದು.

1. ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ, ಜೆ.ಎಸ್.ವೈ.ಎಸ್.
2. ಸಮೂಹ ಮಾರ್ಗದರ್ಶನ ತಂಡದ ನಾಯಕರು
3. ಜೆ.ಎಸ್.ವೈ.ಎಸ್. ಜಿಲ್ಲಾ/ತಾಲ್ಲೂಕು ಕೆರೆ ಒಕ್ಕೂಟದ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳು

ಮೇಲ್ಕಂಡ ಸಮಿತಿಯ ಜವಾಬ್ದಾರಿಗಳು :

1. ತಿಂಗಳಿಗೊಮ್ಮೆ ನಿಗದಿತ ದಿನಾಂಕ ಮತ್ತು ಸಮಯದಲ್ಲಿ ಸಭೆ ನಡೆಸಿ ಕೆರೆ ಸಂಘಗಳ ಚಟುವಟಿಕೆಗಳ ಮೇಲುಸ್ತುವಾರಿ ನಡೆಸಿ ಸೂಕ್ತ ಮಾರ್ಗದರ್ಶನ ನೀಡುವುದು.
2. ಕೆರೆ ಸಂಘಗಳು ಮತ್ತು ಸಹ ಇಲಾಖೆಗಳಿಗೆ ಸಂಪರ್ಕ (linkages with line departments) ಕಲ್ಪಿಸಲು ಕಾರ್ಯನಿರ್ವಹಿಸುವುದು.

3. ವಿವಿಧ ಇಲಾಖೆಗಳಲ್ಲಿ ಗ್ರಾಮಾಂತರ ಪ್ರದೇಶಕ್ಕೆ ಅನ್ವಯಿಸುವಂತೆ ಆಯವ್ಯಯಗಳಲ್ಲಿ ಹಮ್ಮಿಕೊಳ್ಳಲಾಗುವ ವಿವಿಧ ಕಾರ್ಯಕ್ರಮಗಳನ್ನು ಕೆರೆಸಂಘಗಳ ಮೂಲಕ ಅನುಷ್ಠಾನಗೊಳಿಸಲು ಸಾಧ್ಯವಾಗುವಂತೆ ಸಕಾಲದಲ್ಲಿ ಸಂಪರ್ಕ ಕಲ್ಪಿಸುವುದು.
4. ಕೆರೆ ಬಳಕೆದಾರ ಸಂಘಗಳ ವಾರ್ಷಿಕ ಯೋಜನೆಯನ್ನು ಸೂಕ್ತವಾಗಿ ಕಾರ್ಯರೂಪಕ್ಕೆ ತರುವಲ್ಲಿ ಸಹಾಯಕವಾಗುವುದು.
5. ಕೆರೆ ಸಂಘಗಳ ಚಟುವಟಿಕೆಗಳಿಗೆ ಸಂಬಂಧಿಸಿದ ಪ್ರಗತಿ ವರದಿ, ಕೆರೆಗಳು ಹಾಗೂ ಅದರ ಬಳಕೆಗೆ ಸಂಬಂಧಿಸಿದ ಅಂಕಿ ಅಂಶಗಳು ಹಾಗೂ ಕೆರೆ ಸ್ಥಿತಿಗತಿ ಕುರಿತಂತೆ ಮಾಹಿತಿಯನ್ನು ಕಾಲಕಾಲಕ್ಕೆ ಸಂಬಂಧಪಟ್ಟ ಇಲಾಖೆ ಹಾಗೂ ಜಿಲ್ಲಾಧಿಕಾರಿಯವರಿಗೆ ಸಲ್ಲಿಸುವಂತೆ ಸಂಬಂಧಪಟ್ಟ ಕೆರೆ ಬಳಕೆದಾರರ ಸಂಘಗಳಿಗೆ ಮಾರ್ಗದರ್ಶನ ನೀಡುವುದು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.49

(ಕೆ. ಸುಧಾಕರ ಶೆಟ್ಟಿ)

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಶಿಕ್ಷಣ ಸಚಿವಾಲಯ

ತಿದ್ದುಪಡಿ ಆದೇಶ

ಪ್ರಸ್ತಾವನೆ :

ಸರ್ಕಾರಿ ಆದೇಶ ಸಂಖ್ಯೆ : ಇಡಿ 178 ಟಿಪಿಇ 2009, ದಿನಾಂಕ : 01.08.2009ರ ಅನುಬಂಧದಲ್ಲಿನ ಕಂಡಿಕೆ (12-i) ಹಾಗೂ ಕಂಡಿಕೆ (12-ii) ನ್ನು ಈ ಕೆಳಕಂಡಂತೆ ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕಂಡಿಕೆ ಸಂಖ್ಯೆ	ವಿವರ	ತಿದ್ದುಪಡಿ ಮಾಡಲಾಗಿರುವುದು
12-i	He/She pursued a course of study for not less than 3/3½ academic years & not more than 6/7 academic years	He/She pursued a course of study for not less than 3/3½ academic years & not more than 9/101/2 academic years
12-ii	He/She has completed all the subjects. Students who fail to fulfill all the academic requirements for the award of the Diploma within 6/7 academic years from the year of admission shall forfeit their seat in the course & their seat shall stand cancelled	He/She has completed all the subjects Students who fail to fulfill all the academic requirements for the award of the Diploma within 9/10½ academic years from the year of admission shall forfeit their seat in the course & their seat shall stand cancelled

ಪಿ.ಆರ್.50

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎನ್.ಆರ್. ಪ್ರಭು)

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಶಿಕ್ಷಣ ಸಚಿವಾಲಯ

ತಿದ್ದುಪಡಿ ಆದೇಶ

ವಿಷಯ :ಶ್ರೀ ಸಹ್ಯಾದ್ರಿ ವಿದ್ಯಾಸಂಸ್ಥೆ, ಚಿಗಟೇರಿ, ಹರಪನ ಹಳ್ಳಿ ಸಂಸ್ಥೆಯ ಸಮನ್ವಯ ಶಿಕ್ಷಣ ಯೋಜನೆ 2007-08 ನೇ ಸಾಲಿನ ಅನುದಾನವನ್ನು ದಾವಣಗೆರೆ ಜಿಲ್ಲೆಯ ಬದಲಿಗೆ ಬಳ್ಳಾರಿ ಜಿಲ್ಲೆಗೆ ಬಿಡುಗಡೆ ಮಾಡುವಂತೆ ಕೋರಿರುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಇಡಿ 196 ಯೋಸಕ 2007, ದಿನಾಂಕ 30-5-2008.

2. ಸರ್ಕಾರಿ ಆದೇಶ ಸಂಖ್ಯೆ: ಇಡಿ 138 ಎಂಸಿಡಿ 2009, ದಿನಾಂಕ 23-9-2009.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರಿ ಆದೇಶದ ಅನುಬಂಧದಲ್ಲಿ ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಓದಿಕೊಳ್ಳತಕ್ಕದ್ದು :-

ಕ್ರಮ ಸಂಖ್ಯೆ	ಹಿಂದಿನ ಆದೇಶದಲ್ಲಿದ್ದ ವಿಳಾಸ	ಪ್ರಸ್ತುತ ಬದಲಾವಣೆ ಮಾಡಬೇಕಾದ ತಾಲ್ಲೂಕು ಹಾಗೂ ಜಿಲ್ಲೆ
1.	ಶ್ರೀ ಸಹ್ಯಾದ್ರಿ ಎಜುಕೇಷನ್ ಸೊಸೈಟಿ, ಚಿಗಟೇರಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ	ಶ್ರೀ ಸಹ್ಯಾದ್ರಿ ಎಜುಕೇಷನ್ ಸೊಸೈಟಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ

ಉಳಿದ ಅಂಶಗಳು ಯಥಾವತ್ತಾಗಿ ಮುಂದುವರಿಯುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.51

(ಐ. ಎಫ್. ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ,
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

ಉನ್ನತ ಶಿಕ್ಷಣ ಸಚಿವಾಲಯ

ವಿಷಯ : ಕೆ.ಆರ್. ಪೇಟೆಯ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯ ಸುವರ್ಣ ಮಹೋತ್ಸವ ಆಚರಿಸುವ ಸಲುವಾಗಿ ರೂ. 10.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ದಿನಾಂಕ : 8-7-2009 ರ ಪತ್ರ ಸಂಖ್ಯೆ : ಡಿಟಿಇ 13 ಬಿಎಲ್‌ಡಿ 2009.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೆ.ಆರ್. ಪೇಟೆಯಲ್ಲಿರುವ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯು 1960 ರಲ್ಲಿ ಸಿವಿಲ್, ಎಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ಕೋರ್ಸುಗಳೊಂದಿಗೆ ಪ್ರಾರಂಭವಾಗಿದ್ದು, 1992-93 ರಲ್ಲಿ ಟೆಲಿಕಮ್ಯೂನಿಕೇಶನ್ ಮತ್ತು 1995-96 ರಲ್ಲಿ ಕಂಪ್ಯೂಟರ್ ಸೈನ್ಸ್ ಕೋರ್ಸ್‌ನ್ನು ಪ್ರಾರಂಭಿಸಿದ್ದು, ಫೆಬ್ರವರಿ 2010 ಕ್ಕೆ 50 ವರ್ಷ ಪೂರ್ಣವಾಗಿರುವುದರಿಂದ ಸುವರ್ಣ ಮಹೋತ್ಸವವನ್ನು ಆಚರಿಸಬೇಕಿರುವ ಹಿನ್ನೆಲೆಯಲ್ಲಿ ಸಂಸ್ಥೆಯ ಮುಖ್ಯ ಕಟ್ಟಡ/ಹಾಸ್ಟೆಲ್ ಕಟ್ಟಡಗಳ ದುರಸ್ತಿ, ನವೀಕರಣ, ಡಾಂಬರೀಕರಣ, ಪೈಂಟಿಂಗ್ ಮತ್ತು ಇತರೆ ಕಾಮಗಾರಿಗಳ ಕಾರ್ಯವನ್ನು ಪ್ರಾರಂಭಿಸಬೇಕಾಗಿರುವುದರಿಂದ ರೂ. 1.00 ಕೋಟಿ ವಿಶೇಷ ಅನುದಾನವನ್ನು ಲೆಕ್ಕಶೀರ್ಷಿಕೆ "4202-02-104-1-01-139-ಯೋಜನೆಯಡಿಯಲ್ಲಿ ಬಿಡುಗಡೆಗೊಳಿಸುವಂತೆ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಪ್ರಸ್ತಾಪಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಇಡಿ 296 ಯೋಯೋಕ 2009, ಬೆಂಗಳೂರು ದಿನಾಂಕ 1-1-2010

ಕೆ.ಆರ್. ಪೇಟೆಯ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯ ಸುವರ್ಣ ಮಹೋತ್ಸವವನ್ನು 2010 ರ ಫೆಬ್ರವರಿ ಮಾಹೆಯಲ್ಲಿ ಆಚರಿಸುವ ಹಿನ್ನೆಲೆಯಲ್ಲಿ ಸಂಸ್ಥೆಯ ಮುಖ್ಯ ಕಟ್ಟಡ/ಹಾಸ್ಟೆಲ್ ಕಟ್ಟಡಗಳ ದುರಸ್ತಿ, ನವೀಕರಣ, ಡಾಂಬರೀಕರಣ ಪ್ಲಾಸ್ಟರಿಂಗ್ ಮತ್ತು ವಿದ್ಯುತ್ ವೈರಿಂಗ್ ಕೆಲಸಗಳನ್ನು ಮಾಡಿಸುವ ಸಲುವಾಗಿ ರೂ. 10.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಈ ಅನುದಾನವನ್ನು ರಾಜಸ್ವ ಲೆಕ್ಕಶೀರ್ಷಿಕೆ "2202-00-105-0-01-071 ಅಡಿಯಲ್ಲಿ ಭರಿಸತಕ್ಕದ್ದು. ಈ ಸಂಬಂಧ ಖರೀದಿ ಮಾಡುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 1872 ವೆಚ್ಚ-8/2009 ದಿನಾಂಕ 22-12-2009 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.52

(ಐ.ಎಫ್. ಮಾಗಿ)
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ಯೋಜನೆ)

ಉನ್ನತ ಶಿಕ್ಷಣ ಸಚಿವಾಲಯ

ವಿಷಯ : 2009-10ನೇ ಶೈಕ್ಷಣಿಕ ಸಾಲಿನಿಂದ ಎಸ್.ಜೆ.ಆರ್. ಬಿ.ಇಡಿ. ಕಾಲೇಜು, ನೂಲ್ವಿ, ಧಾರವಾಡ, ಈ ಸಂಸ್ಥೆಯ ಬಿ.ಇಡಿ. ಕೋರ್ಸಿನ ವಿದ್ಯಾರ್ಥಿ ಪ್ರಮಾಣ ನಿರ್ಧರಣೆ ಬಗ್ಗೆ.

ಉಲ್ಲೇಖ : 1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ : ಇಡಿ 252 ಯುಕೆವಿ 2009, ದಿನಾಂಕ : 27-10-2009

2. ಎನ್.ಸಿ.ಟಿ.ಇ. ಪತ್ರ ಸಂಖ್ಯೆ :F.SRC/NCTE/2009/B.Ed./RO/14748, ದಿನಾಂಕ : 27-07-2009.

3. ಕರ್ನಾಟಕ ವಿಶ್ವವಿದ್ಯಾನಿಲಯದ ಕುಲಸಚಿವರ ಪತ್ರ ಸಂಖ್ಯೆ : ಕೆಯು/ಸಿಡಿಸಿ/ಸಂಯೋಜನೆ/2009-10/3017, ದಿನಾಂಕ : 17-9-2009.

ಪ್ರಸ್ತಾವನೆ :

ಸರ್ಕಾರಿ/ವಿಶ್ವವಿದ್ಯಾಲಯ/ಅನುದಾನಿತ/ಖಾಸಗಿ ಶಿಕ್ಷಣ ಕಾಲೇಜುಗಳಲ್ಲಿ ನಡೆಸಲಾಗುತ್ತಿರುವ ಬಿ.ಇಡಿ./ಎಂ.ಪಿ.ಇಡಿ. ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು ಪ್ರತಿ ಶೈಕ್ಷಣಿಕ ವರ್ಷಕ್ಕೆ ಅನ್ವಯವಾಗುವಂತೆ ಎನ್.ಸಿ.ಟಿ.ಇ. ಅಧಿನಿಯಮ 1993 ರ 14ನೇ ಪ್ರಕರಣದಡಿ ಎನ್.ಸಿ.ಟಿ.ಇ. ಮಂಜೂರು ಮಾಡುವ ವಿದ್ಯಾರ್ಥಿ ಪ್ರಮಾಣವನ್ನು ಕೆ.ಎಸ್.ಯು. ಅಧಿನಿಯಮ 59(18)ನೇ ಪ್ರಕರಣದಡಿ ಒದಲಾದ ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ಬಿ.ಇಡಿ. ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿಗಳು, 1999 ರ 2 (1)ನೇ ನಿಯಮದಡಿ ಸರ್ಕಾರವು ನಿಗದಿಪಡಿಸುತ್ತಿದೆ.

2. ಉಲ್ಲೇಖ (1) ರಲ್ಲಿರುವ ಸರ್ಕಾರಿ ಆದೇಶದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಗ್ರೂಪ್ ಎಜುಕೇಶನ್ ಸೊಸಾಯಿಟಿ, ನೂಲ್ವಿ, ಧಾರವಾಡ ಜಿಲ್ಲೆ ಈ ಸಂಸ್ಥೆಯ ಎಸ್.ಜೆ.ಆರ್. ಬಿ.ಇಡಿ. ಕಾಲೇಜನ್ನು ನೂಲ್ವಿ, ಧಾರವಾಡ, ಇಲ್ಲಿ ಬಿ.ಇಡಿ. ಕೋರ್ಸಿನೊಂದಿಗೆ 100 (ಒಂದು ನೂರು) ವಿದ್ಯಾರ್ಥಿ ಪ್ರಮಾಣದೊಂದಿಗೆ ಪ್ರಾರಂಭಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿತ್ತು. ಉಲ್ಲೇಖ (2) ರಲ್ಲಿರುವ ಆದೇಶದಲ್ಲಿ ಎನ್.ಸಿ.ಟಿ.ಇ. ಸದರಿ ಕಾಲೇಜಿನ ಬಿ.ಇಡಿ. ಕೋರ್ಸಿಗೆ 2009-10ನೇ ಸಾಲಿನಿಂದ ಅನ್ವಯವಾಗುವಂತೆ 100 (ಒಂದು ನೂರು) ವಿದ್ಯಾರ್ಥಿ ಪ್ರಮಾಣದೊಂದಿಗೆ ಅನುಮೋದನೆ ನೀಡಿರುವುದರ ಮೇರೆಗೆ ಹಾಗೂ ಉಲ್ಲೇಖ (3) ರಲ್ಲಿರುವ ಪತ್ರದಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಈ ಸಂಸ್ಥೆಗೆ 2009-10ನೇ ಸಾಲಿನಿಂದ ಪ್ರಾರಂಭಿಸಲು ಸರ್ಕಾರದ ನಿರ್ದೇಶನಕ್ಕಾಗಿ ಸಲ್ಲಿಸಿದ್ದರ ಮೇರೆಗೆ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಇಡಿ 252 ಯುಕೆವಿ 2009, ಬೆಂಗಳೂರು, ದಿನಾಂಕ: 26-12-2009

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ 59ನೇ ಪ್ರಕರಣದ (18)ನೇ ಉಪಪ್ರಕರಣದಡಿ ಒದಲಾದ ಕರ್ನಾಟಕ ಬಿ.ಇಡಿ./ಎಂ.ಪಿ.ಇಡಿ. ಕೋರ್ಸಿಗೆ ಅಭ್ಯರ್ಥಿಗಳ ಆಯ್ಕೆ ನಿಯಮಗಳು 1999ರ 2(1)ನೇ ನಿಯಮದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಎಸ್.ಜೆ.ಆರ್. ಬಿ.ಇಡಿ. ಕಾಲೇಜು, ನೂಲ್ವಿ, ಧಾರವಾಡ, ವಿದ್ಯಾಸಂಸ್ಥೆಯ ಬಿ.ಇಡಿ. ಕೋರ್ಸಿಗೆ 2009-10ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ 100 (ಒಂದು ನೂರು) ವಿದ್ಯಾರ್ಥಿ ಪ್ರಮಾಣವನ್ನು ನಿಗದಿಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.53

(ಬಿ.ಎಸ್. ಜಾಪಾಲಿ)
ಸರ್ಕಾರದ ಜಂಟಿ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ
(ವಿಶ್ವವಿದ್ಯಾನಿಲಯಗಳು).

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಬೀದರ್ ಜಿಲ್ಲೆ ಭಾಲ್ಕಿ ಪಟ್ಟಣದಲ್ಲಿ ಬೊಮ್ಮಗೊಂಡೇಶ್ವರ ಮೂರ್ತಿ ಸ್ಥಾಪನೆಗೆ ಅನುದಾನ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಇವರ ಪತ್ರ ಸಂ : ಕಸನಿ 5/ಪ್ರತಿಮೆ 2006-07, ದಿನಾಂಕ : 26-8-2009

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ 26-8-2009ರ ಪತ್ರದಲ್ಲಿ ಬೀದರ್ ಜಿಲ್ಲೆ ಭಾಲ್ಕಿ ಪಟ್ಟಣದಲ್ಲಿ ಬೊಮ್ಮಗೊಂಡೇಶ್ವರ ಮೂರ್ತಿ ಸ್ಥಾಪನೆಗೆ ಅನುದಾನ ಮಂಜೂರು ಮಾಡುವಂತೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಈಶ್ವರ ಖಂಡ್ರೆ ಅವರು ಮಾನ್ಯ ಮುಖ್ಯಮಂತ್ರಿಗಳಿಗೆ ಕೋರಿದ್ದು, ಈ ಯೋಜನೆಯನ್ನು ಅನುಷ್ಠಾನಗೊಳಿಸಲು ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಲು ಮಾನ್ಯ ಮುಖ್ಯಮಂತ್ರಿಗಳು ಆದೇಶಿಸಿರುವ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆಯ ಐತಿಹಾಸಿಕ ಪುರುಷರಾದ ಮಹಾತ್ಮ ಬೊಮ್ಮಗೊಂಡೇಶ್ವರರು ಸಾಮಾಜಿಕ ಕಾರ್ಯಗಳನ್ನು ಮಾಡುವುದರ ಜೊತೆಗೆ ಬಹಮನಿ ಅರಸರ ಕೃಪಕಟಾಕ್ಷಕ್ಕೆ ಪಾತ್ರರಾಗಿ ರೈತರಿಗೆ ಅನೇಕ ಸಹಾಯಗಳನ್ನು ಮಾಡಿದ್ದಾರೆ ಹಾಗೂ ಅನೀತಿ, ಅಧರ್ಮದ ವಿರುದ್ಧ ಹೋರಾಡಿದ್ದಾರೆಂದು. ಇಂತಹ ಮಹಾ ಪುರುಷರ ಪ್ರತಿಮೆಯನ್ನು ಭಾಲ್ಕಿ ಪಟ್ಟಣದಲ್ಲಿ ಸ್ಥಾಪಿಸುವುದು ಸೂಕ್ತವಾಗಿರುವುದರಿಂದ ಶ್ರೀ ಬೊಮ್ಮಗೊಂಡೇಶ್ವರ ಪ್ರತಿಮೆ ಸ್ಥಾಪನೆಗಾಗಿ ರೂ. 10.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ, ಬೀದರ್ ಇವರಿಗೆ ಬಿಡುಗಡೆ ಮಾಡುವಂತೆ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಕೋರಿರುತ್ತಾರೆ ಹಾಗೂ ಈ ವೆಚ್ಚವನ್ನು 2009-10ನೇ ಸಾಲಿನ ಲೆಕ್ಕಶೀರ್ಷಿಕೆ 2205-00-800-0-10-059 (ಯೋಜನೆ) ಸ್ವಾತಂತ್ರ್ಯ ಹೋರಾಟಗಾರರ ಅಭಿವೃದ್ಧಿ. ಕ್ರಿ.ಯೋ. ಸಂ. 36 ರಡಿ ಹೆಚ್ಚುವರಿಯಾಗಿ ಒದಗಿಸಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 54 ಸ್ಮಾಪ್ರನಿ 2009, ಬೆಂಗಳೂರು, ದಿನಾಂಕ: 30-12-2009.

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆ ಭಾಲ್ಕಿ ಪಟ್ಟಣದಲ್ಲಿ ಮಹಾತ್ಮ ಬೊಮ್ಮಗೊಂಡೇಶ್ವರರ ಮೂರ್ತಿ ಸ್ಥಾಪನೆಗೆ ರೂ. 10.00 ಲಕ್ಷ (ರೂಪಾಯಿ ಹತ್ತು ಲಕ್ಷಗಳು ಮಾತ್ರ) ಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ, ಬೀದರ್ ಇವರಿಗೆ ಬಿಡುಗಡೆ ಮಾಡಿದೆ.

1. ಈ ಮೊತ್ತವನ್ನು ಕರ್ನಾಟಕ ವಸ್ತು ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999-2000 ಗಳನ್ನು ಅನುಸರಿಸಿ ಟೆಂಡರ್ ಪ್ರಕ್ರಿಯೆಗಳ ಮೂಲಕ ಖರ್ಚು ಮಾಡತಕ್ಕದ್ದು.
2. ಯಾವ ಉದ್ದೇಶಕ್ಕೆ ಹಣ ಬಿಡುಗಡೆ ಮಾಡಲಾಗಿದೆಯೊ ಅದೇ ಉದ್ದೇಶಕ್ಕೆ ಬಳಸತಕ್ಕದ್ದು.
3. ನಿಗದಿತ ಸಮಯ/ಅವಧಿಯೊಳಗೆ ಕಾರ್ಯಕ್ರಮ/ಕಾಮಗಾರಿ ಮಾಡತಕ್ಕದ್ದು.
4. ಬಿಡುಗಡೆಗೊಳಿಸಿದ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

ಈ ವೆಚ್ಚವನ್ನು 2009-10ನೇ ಸಾಲಿನ ಲೆಕ್ಕಶೀರ್ಷಿಕೆ 2205-00-102-4-31 (ಕನ್ನಡ ಮತ್ತು ಸಂಸ್ಕೃತಿಗೆ ಉತ್ತೇಜನ) - 59 ಇದರಡಿ ಒದಗಿಸಲಾಗಿರುವ ರೂ. 30.00 ಕೋಟಿಗಳಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ದಿನಾಂಕ 9-12-2009 ರ ಟಿಪ್ಪಣಿ ಸಂಖ್ಯೆ ಆ.ಇ. 1185 ವೆಚ್ಚ-7/2009 ರಲ್ಲಿ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ.

ಪಿ.ಆರ್.54

(ಎಂ.ಕೆ. ಧರ್ಮರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ. (ಆಡಳಿತ ಕನ್ನಡ)

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಜನವರಿ ೨೮, ೨೦೧೦ (ಮಾಘ ೮, ಶಕ ವರ್ಷ ೧೯೩೧)	ಸಂಚಿಕೆ ೪

ಭಾಗ – ೨

ನೇಮಕಗಳು, ಸ್ಥಳ ನೇಮಕಗಳು, ವರ್ಗಾವಣೆಗಳು, ರಜೆ ಮತ್ತು ಅಧಿಕಾರಿಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆಗಳು.

PERSONNEL AND ADMINISTRATIVE REFORMS SECRETARIAT

NOTIFICATION

No. DPAR 466 SAS 2009, Bangalore, Dated:6th January, 2010

1) Sri Bevis A. Coutinho, IAS (KN 77), waiting for posting is posted with immediate effect and until further orders as Commissioner, Bangalore Metropolitan Regional Development Authority, Bangalore in the existing vacancy.

Government hereby declare u/r 9 of IAS (Pay) Rules, 2007 that the posts of Commissioner, Bangalore, Metropolitan Regional Development Authority in the HAG Scale of IAS carrying the Pay Scale of Rs. 67000-79000, is equivalent in status and responsibilities to the cadre post of Director General, Administrative Training Institute, Mysore included in the Schedule II to the Said Rules.

2) Sri Sanjiv Kumar, IAS (KN 86), waiting for posting is posted with immediate effect and until further orders as Secretary to Government, Planning & Statistic Department, Bangalore in the existing downgraded vacancy.

By Order and in the name of the Governor of Karnataka,

P.R. 73

K.G. ANANTHA

Under Secretary to Government,

Department of Personnel and Administrative Reforms (Services-I)

NOTIFICATION No. DPAR 442 SAS 2009, Bangalore, Dated:6th January, 2010

1) Sri A.K. Monnappa, IAS (KN 92), Commissioner for Cane Development & Director of Sugar, Bangalore, is placed in concurrent charge of the post of Managing Director, Mysore Sugar Company, Limited Bangalore until further orders vice Sri Chakravarthi Mohan, IAS transferred.

2) Dr. K.H. Govinda Raj. IAS (MH 95), Additional Commissioner for Commercial Taxes (Intelligence) Bangalore is transferred with immediate effect and his services are placed at the disposal of Urban Development Department until further orders for being posted as Special Commissioner, Bruhat Bangalore Mahanagara Palike, Bangalore in the existing vacancy.

3) The services of Sri Chakravarthi Mohan IAS (KN 99), Managing Director, Mysore Sugar Company Limited, Bangalore are withdrawn from Commerce and Industries Department with immediate effect and he is posted until further orders as Deputy Commissioner, Chamarajanagara District, Chamarajanagara in the existing vacancy.

4) Sri Manoj Kumar Meena, IAS (KN 2003), waiting for posting is posted with immediate effect and until further orders as Additional Commissioner for Commercial Taxes (Intelligence), Bangalore vice Dr. K.H. Govinda Raj IAS transferred.

By Order and in the name of the Governor of Karnataka,

P.R. 74

K.G. ANANTHA

Under Secretary to Government,

Department of Personnel and Administrative Reforms (Services-I)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 240 ಎಸ್‌ಐಎಸ್ 2009, ಬೆಂಗಳೂರು, ದಿನಾಂಕ:8ನೇ ಜನವರಿ, 2010

ಡಾ:ಕೆ.ವಿ. ತ್ರಿಲೋಕ್ ಚಂದ್ರ ಭಾ.ಆ.ಸೇ. (Probationer) ಜಿಲ್ಲಾಧಿಕಾರಿಗಳ ಕಛೇರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರಿಗೆ ದಿನಾಂಕ:28.11.2007 ರಿಂದ 30.11.2007 ರವರೆವಿಗೆ (ಉದಿಸೇ) ಒಟ್ಟು 03 ದಿನಗಳ ಗಳಿಕೆ ರಜೆಯನ್ನು ಘಟನೋತ್ತರವಾಗಿ ಮಂಜೂರು ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 75

ಕೆ.ಜಿ. ಅನಂತ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–I)

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 381 ಎಎಸ್‌ಡಿ 2008, ಬೆಂಗಳೂರು, ದಿನಾಂಕ:1ನೇ ಜನವರಿ, 2010

ಶ್ರೀಮತಿ ಷಾಹಿದಾ ಬೇಗಾಂ, ನಿವೃತ್ತ ತಹಶೀಲ್ದಾರ್, ದಾವಣಗೆರೆ (ಜೇಷ್ಠತಾ ಸಂ:3033) ಇವರಿಗಿಂತ ಜೇಷ್ಠತೆಯಲ್ಲಿ ಕಿರಿಯರಾದ ಶ್ರೀ ಸುರೇಶ್ ಜಿರ್ಲಿ (ಜೇಷ್ಠತಾ ಸಂ:3036) ಇವರಿಗೆ ದಿನಾಂಕ:4.1.2001 ರಿಂದ ಜಾರಿಗೆ ಬರುವಂತೆ ಸರ್ಕಾರದ ಅಧಿಸೂಚನೆ ಸಂ:ಆರ್ ಡಿ 34 ಎಎಸ್ ಡಿ 2003 ದಿನಾಂಕ: 24.12.2007ರಲ್ಲಿ ಕೆಸಿಎಸ್‌ಆರ್ ನಿಯಮ 32ರಡಿಯಲ್ಲಿ ಸ್ವತಂತ್ರ ಪ್ರಭಾರದಲ್ಲಿರುವ ತಹಶೀಲ್ದಾರರುಗಳನ್ನು ತಹಶೀಲ್ದಾರ ಗ್ರೇಡ್–I ವೃಂದದಲ್ಲಿ ಬಡ್ತಿ ಸಕ್ರಮಗೊಳಿಸಿ ಆದೇಶಿಸಿರುವುದರಿಂದ ಶ್ರೀಮತಿ ಷಾಹಿದಾ ಬೇಗಂ, ನಿವೃತ್ತ ತಹಶೀಲ್ದಾರ್ ಇವರಿಗೂ ಸಹಾ ದಿನಾಂಕ:4.1.2001 ರಿಂದ ಜಾರಿಗೆ ಬರುವಂತೆ ಪೂರ್ವಾನ್ವಯವಾಗಿ ಕರ್ನಾಟಕ ನಾಗರೀಕ ಸೇವಾ (ಆರ್ ಪಿಪಿ) ನಿಯಮಗಳು 1978ರ ನಿಯಮ 2(2)ರನ್ವಯ ತಹಶೀಲ್ದಾರ್ ಗ್ರೇಡ್– I ವೃಂದದಲ್ಲಿ ಬಡ್ತಿ ಸಕ್ರಮಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 76

ಎಸ್.ಬಿ. ಸಾಸಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು–3)

ಸಮಾಜ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಕಇ 141 ಎಸ್ಎಡಿ 2009, ಬೆಂಗಳೂರು, ದಿನಾಂಕ:26ನೇ ಡಿಸೆಂಬರ್, 2009

ಮಾನ್ಯ ನಿವೃತ್ತ ನ್ಯಾಯಾಧೀಶರಾದ ಶ್ರೀ ಎ.ಜೆ. ಸದಾಶಿವ ವಿಚಾರಣಾ ಆಯೋಗವನ್ನು ಅಧಿಸೂಚನೆ ಸಂಖ್ಯೆ:ಸಕಇ 227 ಎಸ್ಎಡಿ 2003 ದಿನಾಂಕ:24.9.2005ರಲ್ಲಿ ನೇಮಕ ಮಾಡಲಾಗಿದ್ದು, ಆ ಆಯೋಗವು ಈ ಕೆಳಗಿನ ಕಾರ್ಯ ನಿರ್ವಹಿಸಬೇಕಾಗಿರುತ್ತದೆ.

"to identify the particular castes, races and tribes of scheduled Castes in the State of Karnataka to whom the benefits of reservation are not percolating equitably and to suggest within a period of twelve months what are all the measures and positive steps that should be taken so as to enable them to compete with other categories of the Scheduled Castes in the State and other relevant aspects".

ನಂತರ ಆಯೋಗದ ಕಾರ್ಯನಿರ್ವಹಣಾ ಅವಧಿಯನ್ನು ಕಾಲಕಾಲಕ್ಕೆ ವಿಸ್ತರಿಸಲಾಗಿದ್ದು ಇತ್ತೀಚೆಗೆ ಅಧಿಸೂಚನೆ ಸಂಖ್ಯೆ:ಸಕಇ 11 ಎಸ್ಎಡಿ 2007 ದಿನಾಂಕ:29.6.2009ರಲ್ಲಿ ದಿನಾಂಕ:1.7.2009 ರಿಂದ 31.12.2009ರವರೆಗೆ ವಿಸ್ತರಿಸಲಾಗಿತ್ತು.

ಶ್ರೀ ಎ.ಜೆ. ಸದಾಶಿವ ವಿಚಾರಣಾ ಆಯೋಗದ ಕಾರ್ಯನಿರ್ವಹಣಾ ಅವಧಿಯನ್ನು ಇನ್ನೂ ಒಂದು ವರ್ಷದ ಅವಧಿಗೆ (ದಿನಾಂಕ:1.1.2010 ರಿಂದ 31.12.2010) ವಿಸ್ತರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 77

ಎಸ್. ಲೋಕನಾಥರಾವ್

ಸರ್ಕಾರದ ಅಧೀನ ಕಾರ್ಯದರ್ಶಿ–2

ಸಮಾಜ ಕಲ್ಯಾಣ ಇಲಾಖೆ.

OFFICE OF THE CITY CIVIL COURT, BANGALORE

NOTIFICATION

No. ADM-I (E) 36 /2010, Bangalore, Dated:13th January, 2010

Smt T. Narendra, Asst Registrar of City Civil Court, Bangalore is granted 5 days earned leave from 7.9.2009 to 11.9.2009, on medical ground.

Sri K.S. Jere, Asst, Registrar, City Civil Court, Bangalore is placed in additional charge of Smt. T. Narendra, Asst. Registrar, City Civil Court, Bangalore, during the above leave period.

Smt. T. Narendra, Asst. Registrar, City Civil Court, Bangalore would have continued in the same post, but for proceedings on leave.

By Order of the Prl .City Civil & Sessions Judge, Bangalore,

P.R. 78

Registrar,

City Civil Court, Bangalore

OFFICE OF THE CITY CIVIL COURT, BANGALORE

NOTIFICATION

No. ADM-I (E) 38 /2010, Bangalore, Dated:13th January, 2010

Sri K.S. Jere, Asst Registrar of City Civil Court, Bangalore is granted six days earned leave from 30.11.2009 to 5.12.2009, on personal ground.

Sri K. Krishna Naik, Asst Registrar, is placed in additional charge of Sri K.S. Jere Asst. Registrar, City Civil Court, Bangalore, during the above leave period.

Sri K.S. Jere, Asst. Registrar, City Civil Court, Bangalore would have continued in the same post. But for proceeding on leave.

By Order of the Prl .City Civil & Sessions Judge, Bangalore,

P.R. 79

Registrar,

City Civil Court, Bangalore

ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆನಾಸ 115 ಸಲಫ 2009, ಬೆಂಗಳೂರು, ದಿನಾಂಕ: 8ನೇ ಜನವರಿ, 2010

ಗ್ರಾಹಕ ಸಂರಕ್ಷಣಾ ಅಧಿನಿಯಮ 1986ರ ಕಲಂ 10ರ ಉಪ ಕಲಂ (1ಎ)ರಡಿಯಲ್ಲಿನ ಆಯ್ಕೆ ಸಮಿತಿಯು ದಿನಾಂಕ:30.10.2009ರಂದು ತೆಗೆದುಕೊಂಡ ತೀರ್ಮಾನದಂತೆ ಈ ಕೆಳಗಿನ ಕಾಲಂ-2ರಲ್ಲಿರುವವರನ್ನು ಅವರ ಹೆಸರಿನ ಮುಂದೆ ಕಾಲಂ-3ರಲ್ಲಿ ಸೂಚಿಸಿರುವ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಒಂದು ಸದಸ್ಯರ ಸ್ಥಾನಕ್ಕೆ ಹಾಗೂ ಐದು ಜಿಲ್ಲಾ ವೇದಿಕೆಗಳ ಅಧ್ಯಕ್ಷರ ಸ್ಥಾನಗಳಿಗೆ ನೇಮಕ ಮಾಡಲಾಗಿದೆ.

ಕ್ರ.ಸಂ	ಅಭ್ಯರ್ಥಿಗಳ ಹೆಸರು ಮತ್ತು ವಿಳಾಸ	ನೇಮಕಾತಿ ಮಾಡಿದ ಹುದ್ದೆ/ಸ್ಥಳ
1	ಶ್ರೀ ಎ.ಎಂ. ಬೆನ್ನೂರ್, ಎಸ್.ಜೆ.ಎಸ್. ಉದ್ಯಾನ್ ಫ್ಲಾಟ್, ನಂ.ಟಿ-1 ಕುವೆಂಪು ರಸ್ತೆ, 7ನೇ ಅಡ್ಡ ರಸ್ತೆ, ವಿಜ್ಞಾನ ನಗರ, ನ್ಯೂ ತಿಪ್ಪಸಂದ್ರ ಪೋಸ್ಟ್, ಬೆಂಗಳೂರು-560075	ಸದಸ್ಯರು, ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬೆಂಗಳೂರು ಇಲ್ಲಿ ದಿ:11.4.2010ರ ಅಪರಾಹ್ನದಿಂದ ಜಾರಿಗೆ ಬರುವಂತೆ ಖಾಲಿಯಾಗುವ ಹುದ್ದೆಗೆ
2	ಶ್ರೀ ಶಂಕರ ನಾಗಪ್ಪ ನಾಯಕ, ಸನನಗುಳಿ ಹೌಸ್, ನಂ:1.1.20:80, ಕೊಂಚಾಡಿ ದೇರೆಬೈಲ, ಲ್ಯಾಂಡ್‌ಲಿಂಕ್ಸ್ ಹತ್ತಿರ, ಮಂಗಳೂರು-08	ಅಧ್ಯಕ್ಷರು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ಉಡುಪಿ ಜಿಲ್ಲೆ, ಇಲ್ಲಿ ಖಾಲಿ ಇರುವ ಹುದ್ದೆಗೆ
3	ಶ್ರೀ ಕೆ. ಮನಮೋಹನ ನಂ:31, ಪಿಡಬ್ಲ್ಯೂಡಿ ಕ್ವಾಟ್ರಸ್, ಹೊಸಮನೆ ಎಕ್ಸ್‌ಟೆನ್‌ಷನ್, ಚಿಕ್ಕಮಗಳೂರು-577101	ಅಧ್ಯಕ್ಷರು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ಉತ್ತರ ಕನ್ನಡ ಜಿಲ್ಲೆ, ಕಾರವಾರ ಇಲ್ಲಿ ಖಾಲಿ ಇರುವ ಹುದ್ದೆಗೆ
4	ಶ್ರೀ ಎಸ್.ಎನ್. ನವಲಗುಂದ್, ನಂ:ಜೆಐಡಿ-401. ನ್ಯಾಷನಲ್‌ಗೇಮ್ಸ್ ವಿಲೇಜ್, ಕೋರಮಂಗಲ, ಬೆಂಗಳೂರು-560 047	ಅಧ್ಯಕ್ಷರು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಇಲ್ಲಿ ದಿನಾಂಕ:9.1.2010 ರಿಂದ ಖಾಲಿಯಾಗುವ ಹುದ್ದೆಗೆ
5	ಶ್ರೀ ಹೆಚ್.ವಿ. ರಾಮಚಂದ್ರರಾವ್, ನಂ:16:13, 3ನೇ ಮಹಡಿ, 1ನೇ ಮುಖ್ಯ ರಸ್ತೆ ಕೆಂಪಣ್ಣ ಲೇಔಟ್, ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು-560020	ಅಧ್ಯಕ್ಷರು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ನಗರ 1ನೇ ಅಪರ, ಸ್ವಾತಿ ಕಾಂಪ್ಲೆಕ್ಸ್ ಶೇಷಾದ್ರಿಪುರಂ, ಬೆಂಗಳೂರು-20 ಇಲ್ಲಿ ದಿನಾಂಕ:28.2.2010 ರಿಂದ ಖಾಲಿಯಾಗುವ ಹುದ್ದೆಗೆ
6	ಶ್ರೀ ಹೆಚ್.ಎಸ್. ರಾಮಣ್ಣ ಜೆ-1ಎ, 202, ಎನ್.ಜಿ.ವಿ. ಕಟ್ಟಡ, ಕೋರಮಂಗಲ, ಬೆಂಗಳೂರು-560047	ಅಧ್ಯಕ್ಷರು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇಲ್ಲಿ ದಿನಾಂಕ:2.4.2010 ರಿಂದ ಖಾಲಿಯಾಗುವ ಹುದ್ದೆಗೆ

ಗ್ರಾಹಕ ಸಂರಕ್ಷಣಾ ಅಧಿನಿಯಮ 1986ರ ಕಲಂ 10ರ ಉಪ ಕಲಂ (1ಎ) ರಡಿಯಲ್ಲಿನ ಆಯ್ಕೆ ಸಮಿತಿಯು ಈ ಕೆಳಕಂಡವರನ್ನು ಅವರ ಹೆಸರಿನ ಮುಂದೆ ನಮೂದಿಸಿರುವ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಅಧ್ಯಕ್ಷರ ಹುದ್ದೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಲಾಗಿದೆ.

ಕ್ರ.ಸಂ	ಜಿಲ್ಲಾ ವೇದಿಕೆಯ ಅಧ್ಯಕ್ಷರ, ಹೆಸರು ಮತ್ತು ವಿಳಾಸ	ವರ್ಗಾಯಿಸಿ ನೇಮಿಸಲಾದ ಸ್ಥಳ
1	ಶ್ರೀ ಎಸ್.ಎಂ. ರೆಡ್ಡಿ, ಅಧ್ಯಕ್ಷರು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ	ಅಧ್ಯಕ್ಷರು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ಇಲ್ಲಿ ಶ್ರೀ ಪ್ರಕಾಶ್ ಕುಮಾರ್,ಇವರ ಪರಸ್ಪರ ವರ್ಗಾವಣೆಯಿಂದ ತೆರವಾಗುವ ಸ್ಥಾನಕ್ಕೆ.
2	ಶ್ರೀ ಪ್ರಕಾಶ್ ಕುಮಾರ್, ಅಧ್ಯಕ್ಷರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ, ಗುಲ್ಬರ್ಗಾ ಜಿಲ್ಲೆ ಗುಲ್ಬರ್ಗಾ	ಅಧ್ಯಕ್ಷರು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ಬಳ್ಳಾರಿ ಜಿಲ್ಲೆ, ಬಳ್ಳಾರಿ ಇಲ್ಲಿ ಶ್ರೀ ಎಸ್.ಎಂ. ರೆಡ್ಡಿ, ಇವರ ಪರಸ್ಪರ ವರ್ಗಾವಣೆಯಿಂದ ತೆರವಾಗುವ ಸ್ಥಾನಕ್ಕೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 80

ಟಿ. ಪರಮೇಶ್ವರಪ್ಪ

ಪೀಠಾಧಿಕಾರಿ, ಆಹಾರ-3 ಶಾಖೆ,

ಆಹಾರ, ನಾಗರೀಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಇಲಾಖೆ

ಆರ್ಥಿಕ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಆಇ 155 ಇಪಿಎಸ್ 2009, ಬೆಂಗಳೂರು, ದಿನಾಂಕ: 30ನೇ ಡಿಸೆಂಬರ್, 2009

ರಾಜ್ಯ ಅಬಕಾರಿ ಸೇವೆಗೆ ಸೇರಿದ ಶ್ರೀ ಹೆಚ್.ಬಿ. ಬಾಲಗಂಗಾಧರ, ಅಬಕಾರಿ ಅಧೀಕ್ಷಕರು, ರಾಜ್ಯ ವಿಚಕ್ಷಣಾದಳ ಬೆಂಗಳೂರು, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಇವರನ್ನು ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಮೆ:ಶಿಶಿ ಡಿಸ್ಟಿಲರಿ, ಬೆಂಗಳೂರು ಇಲ್ಲಿ ಖಾಲಿ ಇರುವ ಅಬಕಾರಿ ಅಧೀಕ್ಷಕರ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಿ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 81

ಬಿ.ಎನ್. ಜಗದೀಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ (ಅಬಕಾರಿ)

ಅಧಿಸೂಚನೆ ಸಂಖ್ಯೆ: ಆಇ 128 ಇಪಿಎಸ್ 2009, ಬೆಂಗಳೂರು, ದಿನಾಂಕ: 31ನೇ ಡಿಸೆಂಬರ್, 2009

ರಾಜ್ಯ ಅಬಕಾರಿ ಸೇವೆಗೆ ಸೇರಿದ ಈ ಕೆಳಕಂಡ ಅಬಕಾರಿ ಉಪ ಅಧೀಕ್ಷಕರು, ಇವರುಗಳನ್ನು ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗೆ ವರ್ಗಾಯಿಸಿ ನೇಮಿಸಲಾಗಿದೆ.

ಕ್ರ.ಸಂ	ಅಧಿಕಾರಿಗಳ ಹೆಸರು/ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳ	ವರ್ಗಾಯಿಸಿ ನೇಮಿಸಲಾದ ಸ್ಥಳ
1	ಶ್ರೀ ಶಿವಪ್ರಸಾದ್, ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಉಪ ಆಯುಕ್ತರ ಕಛೇರಿ, ಕೋಲಾರ ಜಿಲ್ಲೆ ಕೋಲಾರ	ಅಬಕಾರಿ ಉಪ ಆಯುಕ್ತರ ಕಛೇರಿ, ತುಮಕೂರು ಜಿಲ್ಲೆ, ತುಮಕೂರು, ಇಲ್ಲಿ ಖಾಲಿ ಇರುವ ಹುದ್ದೆಯಲ್ಲಿ
2	ಶ್ರೀ ಅನಿಲ್ ಕುಮಾರ್, ಅಬಕಾರಿ ಉಪ ಅಧೀಕ್ಷಕರು, ಕೊಪ್ಪಳ ಉಪ ವಿಭಾಗ	ಅಬಕಾರಿ ಆಯುಕ್ತರ ಕಛೇರಿ, ಬೆಂಗಳೂರು ಇಲ್ಲಿ ಖಾಲಿ ಇರುವ ಹುದ್ದೆಯಲ್ಲಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 82

ಬಿ.ಎನ್. ಜಗದೀಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ (ಅಬಕಾರಿ)

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 273 ಎಲೆಸೇ 2008, ಬೆಂಗಳೂರು, ದಿನಾಂಕ: 1ನೇ ಜನವರಿ, 2010

ಸರ್ಕಾರದ ಅಧಿಸೂಚನೆ ಸಂಖ್ಯೆ:ಸಇ 99 ಎಲೆಸೇ 2006 ದಿನಾಂಕ:18.4.2006 ರನ್ವಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಸಹಾಯಕ ನಿರ್ದೇಶಕರ ಹುದ್ದೆಗೆ ಪರಿವೀಕ್ಷಣೆಯ ಮೇಲೆ ಆಯ್ಕೆಗೊಂಡು ಕಾರ್ಯನಿರ್ವಹಿಸುತ್ತಿದ್ದ ಶ್ರೀ ಶೈಲೇಂದ್ರ ಶೆಟ್ಟಣ್ಣನವರ್, ಸಹಾಯಕ ನಿರ್ದೇಶಕರು (ಪರೀಕ್ಷಾರ್ಥಿ) ರವರು ಹುದ್ದೆಗೆ ನಿಗದಿಪಡಿಸಿದ ಇಲಾಖಾ ಪರೀಕ್ಷೆಗಳಲ್ಲಿ ಪಾಸಾಗಿರುವುದಿಲ್ಲ, ನಿಗದಿತ ತರಬೇತಿಗಳನ್ನು ಪೂರೈಸಿರುವುದಿಲ್ಲ ಹಾಗೂ ದಿನಾಂಕ:3.10.2007 ರಿಂದ ಸರ್ಕಾರಿ ಸೇವೆಗೆ ಅನಧಿಕೃತವಾಗಿ ಗೈರು ಹಾಜರಾಗಿರುವ ಕಾರಣಗಳಿಂದ ಇವರನ್ನು ಕರ್ನಾಟಕ ಸರ್ಕಾರಿ ಸೇವಾ (ಪ್ರೊಬೇಷನರಿ) ನಿಯಮಗಳು 1977ರ ನಿಯಮ (6)ರಂತೆ ಈ ಕೂಡಲೇ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ "ಡಿಸ್‌ಚಾರ್ಜ್ ಮಾಡಿದೆ".

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 83

ನಂಜುಂಡಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಸಹಕಾರ ಇಲಾಖೆ

ವಸತಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ವಇ 80 ಹೆಚ್‌ಎಎಂ 2009, ಬೆಂಗಳೂರು, ದಿನಾಂಕ: 2ನೇ ಜನವರಿ, 2010

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ನಿರ್ದೇಶಕರ ಮಂಡಳಿಯ ಸಂಘ ನಿಯಮಾವಳಿಯ ಅನುಚ್ಛೇದ 147(1)ರಲ್ಲಿ ಪ್ರದತ್ತವಾದ ಅಧಿಕಾರದನ್ವಯ, ಮಾನ್ಯ ವಸತಿ ಸಚಿವರಾದ ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು ಅವರನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ನಿರ್ದೇಶಕರು ಮತ್ತು ಅಧ್ಯಕ್ಷರನ್ನಾಗಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 84

ಕೆ.ಆರ್. ವಲ್ಲೂರ

ಪೀಠಾಧಿಕಾರಿ–2

ವಸತಿ ಇಲಾಖೆ

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 620 ಪೊಸಿಪ 2009, ಬೆಂಗಳೂರು, ದಿನಾಂಕ: 11ನೇ ಜನವರಿ, 2010

ಶ್ರೀ ಎಂ.ಆರ್. ರೆಡ್ಡಿ, ಡಿವೈ.ಎಸ್.ಪಿ. (ಸಿವಿಲ್) ಪಿ.ಟಿ.ಸಿ., ಗುಲ್ಬರ್ಗಾ ರವರಿಗೆ ಕೆ.ಸಿ.ಎಸ್.ಆರ್. ನಿಯಮ 285(1)(ಎ) ರನ್ವಯ ಹಾಗೂ ಅದರಡಿಯಲ್ಲಿ ವಿಧಿಸಿರುವ ಷರತ್ತಿಗೊಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಸ್ವ–ಇಚ್ಛಾ ನಿವೃತ್ತಿ ಹೊಂದಲು ಸರ್ಕಾರವು ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 85

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಅಧಿಸೂಚನೆ

ಸಂಖ್ಯೆ: ಒಇ 228 ಪೊಸಿಪ 2009, ಬೆಂಗಳೂರು, ದಿನಾಂಕ: 8ನೇ ಜನವರಿ, 2010

ಸರ್ಕಾರದ ಅಧಿಸೂಚನೆ ಸಂಖ್ಯೆ:ಒಇ 318 ಪೊಸಿಪ 2005 ದಿನಾಂಕ:31.1.2006ರ ಪ್ರಕಾರ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್‌ಗಳ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ) ನಿಯಮಗಳು, 1997ರಡಿಯಲ್ಲಿ ಡಿವೈ.ಎಸ್.ಪಿ (ಸಿವಿಲ್) ವೃಂದದ ಹುದ್ದೆಗೆ ನೇರ ನೇಮಕಾತಿಗೊಂಡ ಶ್ರೀ ಹನುಮಂತರಾಯರವರು ದಿನಾಂಕ 6.2.2006 ಪೂರ್ವಾಹ್ನ ಕರ್ತವ್ಯಕ್ಕೆ ಹಾಜರಾಗಿದ್ದು, ದಿನಾಂಕ:5.8.2008ರಂದು $2\frac{1}{2}$ ವರ್ಷಗಳ ಪರೀಕ್ಷಾರ್ಥ ಅವಧಿಯನ್ನು

ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು, 1977ರ ನಿಯಮ 5(1)(ಎ)ರ ಪ್ರಕಾರ ಘೋಷಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 86 **ಟಿ.ಎಸ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಸಾರಿಗೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಾರಿಇ 101 ಸಾಸಂಸೇ 2009, ಬೆಂಗಳೂರು, ದಿನಾಂಕ: 6ನೇ ಜನವರಿ, 2010

ರಸ್ತೆ ಸಾರಿಗೆ ಸಂಸ್ಥೆಗಳ ಅಧಿನಿಯಮ, 1950 ಸೆಕ್ಷನ್ 14(1)ರನ್ವಯ ಶ್ರೀ ಬಿ. ಚೆನ್ನಸ್ವಾಮಿ ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಬೆಂಗಳೂರು ಇವರಿಗೆ ದರ್ಜೆ–1 ಆಯ್ಕೆ ಶ್ರೇಣಿ (ವೇತನ ಶ್ರೇಣಿ:ರೂ., 19700–650–22950–750–28200–850–31600) ಹುದ್ದೆಯಿಂದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಉನ್ನತೀಕರಿಸಿದ ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು ದರ್ಜೆ–1 ಉಚ್ಚಕಾಲಿಕ ಶ್ರೇಣಿ ಹುದ್ದೆಗೆ (ವೇತನ ಶ್ರೇಣಿ ರೂ. 24500–750–30500–850–32200) ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಮುಂಬಡ್ತಿ ನೀಡಿ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 88 **ಕೆ.ಎಸ್. ಶ್ರೀಧರ**

ಸರ್ಕಾರದ ಅಧೀನ ಕಾರ್ಯದರ್ಶಿ

ಸಾರಿಗೆ ಇಲಾಖೆ

ANIMAL HUSBANDRY AND FISHERIES SECRETARIAT

NOTIFICATION

No. AHF 218 SFE 2009, Bangalore, Dated: 8th January, 2010

Smt Deepanjali A., Assistant Director of Fisheries (Gr-II), O/o Director of Fisheries, Government of Karnataka, Bangalore is deputed as Executive (Technical) in National Fisheries Development Board, Hyderabad on deputation basis (Foreign Service Terms) for a period of three years.

The Terms and Conditions will be issued separately.

By Order and in the name of the Governor of Karnataka,

P.R. 89 **D.M. RAJANNA**

Under Secretary to Government,

Animal Husbandry and Fisheries Department (F)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 225 ಎಸ್‌ಎಫ್‌ಪಿ 2009, ಬೆಂಗಳೂರು, ದಿನಾಂಕ: 12ನೇ ಜನವರಿ, 2010

ಇದೇ ಸಮ ಸಂಖ್ಯೆಯ ದಿನಾಂಕ:9.12.2009ರ ಅಧಿಸೂಚನೆಯ ಮುಂದುವರಿಕೆಯಲ್ಲಿ ಶ್ರೀ ಜೆ.ವಿ. ಸುಗೂರ್, ಭಾ.ಅ.ಸೇ., ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಜಂಟಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಎಫ್.ಡಿ.ಸಿ. ಲಿಮಿಟೆಡ್, ಬೆಂಗಳೂರು ಇವರಿಗೆ ದಿನಾಂಕ:25.12.2009 ರಿಂದ 8.1.2010 ರವರೆಗೆ 15 ದಿನಗಳ ವಿಸ್ತರಿತ ಗಳಿಕೆ ರಜೆಯನ್ನು ಘಟನೋತ್ತರವಾಗಿ ಮಂಜೂರು ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 90 **ಅಶೋಕ್ ಪಿ. ಅತ್ರೆ**

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–4)

ಅಧಿಸೂಚನೆ

ಸಂಖ್ಯೆ: ಸಿಆಸುಇ 04 ಆಸೇವ 2010, ಬೆಂಗಳೂರು, ದಿನಾಂಕ: 7ನೇ ಜನವರಿ, 2010

ಶ್ರೀ ಬಿ.ಎಫ್.ಪಾಟೀಲ್, ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ಅಧಿಕಾರಿ ಹಾಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಗದಗ ಇವರ ಸೇವೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸಿ.ಆ.ಸು ಇಲಾಖೆಯ ವಶಕ್ಕೆ ಹಿಂಪಡೆಯಲಾಗಿದೆ.

ಶ್ರೀಯುತರು ತಮ್ಮ ಹುದ್ದೆಯ ಪ್ರಭಾರವನ್ನು ಗದಗ ಜಿಲ್ಲಾಧಿಕಾರಿಯವರಿಗೆ ತಕ್ಷಣವೇ ವಹಿಸಿಕೊಟ್ಟು ಕರ್ತವ್ಯದಿಂದ ಬಿಡುಗಡೆ ಹೊಂದಿ ಸಿ.ಆ.ಸು. ಇಲಾಖೆಯಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 91

ಎಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–2)

ಅಧಿಸೂಚನೆ

ಸಂಖ್ಯೆ: ಸಿಆಸುಇ 189 ಆಸೇವ 2009, ಬೆಂಗಳೂರು, ದಿನಾಂಕ: 11ನೇ ಜನವರಿ, 2010

